# ಪ,ಫ,ಬ,ಭ, ಅಕ್ಷರದ ವಚನದ ಅರ್ಥ

1) ಪಂಚೇಂದ್ರಿಯ, ಸಪ್ತಧಾತು, ಅಷ್ಟಮದ ಕೊಂದು ಕೂಗಿತ್ತಲ್ಲಾ?
ಹರಿಬ್ರಹ್ಮರ ಬಲುಪ ಮುರಿದು ಕೊಂದು ಕೂಗಿತ್ತಲ್ಲಾ?.
ಮಹಾಋಷಿಯರ ತಪವ ಕೆಡಿಸಿ ಕೊಂಡು ಕೂಗಿತ್ತಲ್ಲಾ?
ಚೆನ್ನಮಲ್ಲಿಕಾರ್ಜುನನಂಗೆ ಶರಣೆಂದು ನಂಬಿ ಮೊರೆಹೊಕ್ಕಡೆ ಅಂಜಿ ನಿಂದುದಲ್ಲಾ.?

## ಪದಗಳ ಅರ್ಥ

ಪಂಚೇಂದ್ರಿಯ--ಕಿವಿ,ಕಣ್ಣು,ಮೂಗು,ನಾಲಿಗೆ, ಚರ್ಮ.
ಸಪ್ತಧಾತು---ರಕ್ತರುಧಿ ಛಲ,ಧನ, ರೂಪ, ಯೌವನ, ವಿದ್ಯಾ, ರಾಜ್ಯ, ತಪ,
ಬಲುಹು- ಶಕ್ತಿ.

## ವಚಪದ ಅರ್ಥ

ಮನುಷ್ಯನ ಶತ್ರುಗಳು ಹೊರಗೇನೂ ಇಲ್ಲ. ಆ ಶತ್ರುಗಳು ನಮ್ಮೊಳಗೇ ಇದ್ದಾ ರೆ.ಮನುಷ್ಯನನ್ನು ಇತರರು ನಾಶಮಾಡುತ್ತಾರೆ ಎಂಬುದು ಸುಳ್ಳು. ನಮ್ಮನ್ನು ನಾಶ ಮಾಡಿಕೊಳ್ಳುವವರು ನಾವೇ ಆಗಿದ್ದೇವೆ. ಅ ಶತ್ರುಗಳು ಬೇರೆ ಯಾರು ಅಲ್ಲ ಪಂಚೇಂದ್ರಿಯ,ಅಷ್ಟಮದ,ಸಪ್ತಧಾತುಗಳು.ಇವು ಈಪೂರ್ವದಲ್ಲಿ ಯಾರು ಯಾರನ್ನು ನಾಶಮಾಡಿವೆ ಉದಾಹರಣೆ ಕೊಟ್ಟಿದ್ದಾರೆ. ಹರಿಬ್ರಹ್ಮರ ಬಲುಹ ಮುರಿದುಕೊಂದು ಕೂಗಿತ್ತಲ್ಲಾ ಹರಿಬ್ರಹ್ಮರ ನಡುವೆ ನಾನು ಹೆಚ್ಚು ನಾನು ಹೆಚ್ಚು ಎಂಬ ಪೈಪೋಟಿ ಉಂಟಾಯಿತು.ಅಹಂಭಾವ ಉದಯವಾಯಿತು. ಆಗ ಆಕಾಶದಲ್ಲಿ ವಾಣಿಆಯಿತು.ಯಾರು ಮೊದಲು ನನ್ನ ಪಾದ ಅಥವಾ ತಲೆ ನೋಡಿ ಬರುತ್ತಾರೆ ಅವರು ಶ್ರೇಷ್ಠರೆಂದು ವಾಣಿ ಆಯಿತು. ತಲೆಯನ್ನು ಬ್ರಹ್ಮ ಪಾದವನ್ನು ವಿಷ್ಣು ಹುಡುಕಿ ಹೊರಟರು. ಇಬ್ಬರಿಗೂ ತಲೆ, ಪಾದದದರ್ಶನ ಆಗಲಿಲ್ಲ. ಅಹಂಕಾರದ ನಾಶವಾಯಿತು. ಇದು ಕಥೆ. ಇದು ಎಲ್ಲರಿಗೂ ಅನ್ವಯವಾಗುವ ಕಥೆ ಪರಮಾತ್ಮ ಮಾತ್ರ ದೊಡ್ಡವನು. ಮಹಾಋಷಿಯರ ತಪವ ಕೆಡಿಸಿ ಕೊಂದು ಕೂಗಿತ್ತಲ್ಲಾ ಎಂತೆಂತಹ ಋಷಿಗಳೆಲ್ಲ ತಪಸ್ಸಿಗೆ ಬಂದರು. ಆದರೆ ಮಾಯೆ ಇವರನ್ನು ಮುಕ್ಕಿ ಬಿಟ್ಟಿತು. ಮಾಯೆ ಮತ್ತು ದೇಹದ

ಶತ್ರುಗಳು ತುಂಬ ಪ್ರಬಲರು. ಇದನ್ನು ನಮಗೆ ಗೆಲ್ಲಲು ಸಾಧ್ಯವಿಲ್ಲ. ಚೆನ್ನಮಲ್ಲಿಕಾರ್ಜುನನ ಅನುಗ್ರಹ, ಅವನಲ್ಲಿ ನಮ್ಮ ಶರಣಾಗತಿ ಮಾತ್ರ ನಮ್ಮನ್ನು ಕಾಪಾಡಬಲ್ಲುದು. ಮಾಯ ಮತ್ತು ಅಷ್ಟಮದ,ಅರಿಷಡ್ವರ್ಗ, ಪಂಚೇಂದ್ರಿಯಗಳು ಪರಿಪೂರ್ಣತೆಗೆ ಮಾತ್ರ ಅಂಜಿ ದೂರ ನಿಲ್ಲುತ್ತವೆ. ಅಕ್ಕಮಹಾದೇವಿಯವರು ಪರಿಪೂರ್ಣ ಶರಣಾಗತರಾದುದರಿಂದಲೇ ಅವರು ಮಾಯೆಯನ್ನು ಗೆದ್ದರು. ಅನುಭಾವ ಜೀವನ ನಡೆಸುವವರಿಗೆ ಮುಖ್ಯ ಬೇಕಾದುದೇನು? ಪರಮಾತ್ಮನಲ್ಲಿ ಅನನ್ಯವಾದ ಭಕ್ತಿ. ಅವನನ್ನು ಪಡೆದೇ ತೀರುತ್ತೇನೆಂಬ ಅಚಲ ಆತ್ಮವಿಶ್ವಾಸ ಮತ್ತು ಪರಮಾತ್ಮನಲ್ಲಿ ಪರಿಪೂರ್ಣವಾದ ಶರಣಾಗತಿ ಬೇಕು. ಆಗ ನಮಗೆ ದೇಹದಿಂದ ಬರುವ ಎಲ್ಲ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು. ಆದರೆ ದೇಹವನ್ನು ಗೆಲ್ಲುವುದು ಅಷ್ಟು ಸರಳವೂ ಅಲ್ಲ ಸುಲಭವೂ ಅಲ್ಲ ಇವತ್ತು ಜಗತ್ತಿನಲ್ಲಿ ಇಷ್ಟೊಂದು ಹಿಂದೆ, ಸ್ವಜನ ಪಕ್ಷಪಾತ, ಸ್ವಾರ್ಥ ತುಂಬಿ ತುಳುಕಾಡಲು ಮುಖ್ಯ ಕಾರಣ ಮನುಷ್ಯ ದೇಹಾಧೀನನಾಗಿರುವುದೇ ಆಗಿದೆ.

2)ಪೃಥ್ವಿ ಪೃಥ್ವಿಯ ಕೂಡದ ಮುನ್ನ
ಅಪ್ಪು ಅಪ್ಪುವ ಕೂಡದ ಮುನ್ನ
ತೇಜ ತೇಜವ ಕೂಡದ ಮುನ್ನ
ವಾಯು ವಾಯುವ ಕೂಡದ ಮುನ್ನ
ಆಕಾಶ ಆಕಾಶವ ಕೂಡದ ಮುನ್ನ ಪಂಚೇಂದ್ರಿಯಗಳೆಲ್ಲ ಹಂಚು ಹರಿಯಾಗದ ಮುನ್ನ ಚೆನ್ನಮಲ್ಲಿಕಾರ್ಜುನಂಗೆ ಶರಣೆನ್ನಿರೆ.

### ವಚನದ ಅರ್ಥ

ಉದಲಯಾಸ್ತಮಾನವೆಂಬೆರಡು ಕೊಳಗದಲ್ಲಿ ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ ಶಿವನ ನೆನೆಯಿರೆ . ಎಂಬ ಅಕ್ಕಮಹಾದೇವಿಯವರ ಆರೆಂಟು ವಚನಗಳಲ್ಲಿ ಪ್ರಕ ಟವಾಗಿವೆ. ಮನುಷ್ಯನು ರಾಗಾದಿಗಳಿಂದ ಮತ್ತನಾಗುವ ಕಾಲಕ್ಕೆ ಇಂತಹ ಎಚ್ಚರಿಕೆಯ ವಿಚಾರಗಳನ್ನು ಅಕ್ಕಮಹಾದೇವಿಯರು ತಿಳಿಸಿದ್ದಾರೆ. ಈ ಜಗತ್ತಿನ ಉದಯಕ್ಕೆ ನಾಶಕ್ಕೆ ಎರಡಕ್ಕೂ ಪಂಚಮಹಾಭೂ;ತಗಳ ಕಾರಣವಾಗಿವೆ. ಇವುಗಳ ಹಿನ್ನೆಲೆಯಲ್ಲಿ

ಈ ವಚನರಚನೆಯಾಗಿದೆ. ಈ ಭೂಮಿ ಮಣ್ಣು, ನಮ್ಮ ದೇಹವೂ ಮಣ್ಣು ನಾವು ತೆಗೆದು ಕೊಂಡ ಆಹಾರವು ಮಣ್ಣೆ ಆಗುತ್ತದೆ. ಈ ದೇಹದೊಳಗಿರುವ ಪ್ರಾಣ ಹೋದರೆ ನಮ್ಮ ದೇಹವು ಮಣ್ಣಾಗುತ್ತದೆ. ಮಣ್ಣು ಮಣ್ಣನ್ನು ಕೂಡುತ್ತದೆ. ಅಪ್ಪು ಅಪ್ಪುವ ಕೂಡದ ಮುನ್ನ, ನಮ್ಮ ದೇಹವು 90 ಭಾಗ ನೀರಿನಿಂದ ಕೂಡಿದೆ. ರಕ್ತ ಮೂತ್ರ ಇತರೆ ದ್ರವಗಳೂ ನೀರಿನ ಇನ್ನೊಂದು ರೂಪವೆ. ನಾವು ದೇಹ ಬಿಟ್ಟಾಗ ನಮ್ಮೊಳಗಿದ್ದ ನೀರು ಹೊರಗಿನ ನೀರಿನೊಂದಿಗೆ ಬಯಲಾಗುತ್ತದೆ. ತೇಜ ತೇಜವ ಕೂಡದ ಮುನ್ನ, ನಮ್ಮ ಶರೀರ ಬಿಸಿ ಇದೆ. ಉಷ್ಣತೆಯಿಂದ ಕೂಡಿದೆ. ಈ ದೇಹ ತಣ್ಣಗಾದರೆ, ಮಣ್ಣಿಗೆ ಕೊಟ್ಟು ಬಿಡುತ್ತಾರೆ.ನಮ್ಮ ದೇಹದೊಳಗಿನ ಅಗ್ನಿಯು ಹೊರಗಿನ ಅಗ್ನಿಯಲ್ಲಿ ಬಯಲಾಗು ಇದೆ. ನಮ್ಮ ದೇಹವು ರಚನೆಯಾಗುವಾಗ ಕಣ್ಣು, ತೇಜತತ್ವ ದಿಂದ ರೂಪ ಪಡೆಯುತ್ತದೆ. ಈ ತೇಜವು ನಮ್ಮ ಶರೀರದಿಂದ ಹೋದಾಗ ದೃಷ್ಟಿಯೂ ಹೋಗುತ್ತದೆ. ವಾಯು ವಾಯುವ ಕೂಡದ ಮುನ್ನ. ನಮ್ಮೊಳಗೆ ಗಾಳಿ ಇದೆ . ನಾವು ಜೀವಂತ ಇರಲು ಗಾಳಿಯ ಅವಶ್ಯಕತೆಯಿದೆ. ನಾವು ಜೀವಂತ ಇರುವವರೆಗೆ ಉಸಿರಾಟ ನಡೆದೆ ಇರುತ್ತದೆ. ಉಸಿರಾಟ ನಿಂತಾಗ ನಮ್ಮೊಳಗಿನ ಗಾಳಿ ಹೊರಗಿನ ಗಾಳಿಯಲ್ಲಿ ಬಯಲಾಗುತ್ತದೆ. ವಾಯು ತತ್ವದಿಂದ ನಮ್ಮೊಳಗೆ ವಾಸನೇಂದ್ರಿಯ ಸೃಷ್ಟಿಯಾಗುತ್ತದೆ. ವಾಯುತತ್ವ ಬಯಲಾದಾಗ ವಾಸನೇಂದ್ರಿಯ ಶಕ್ತಿಯೂ ಬಯಲಾಗುತ್ತದೆ. ಆಕಾಶ ಆಕಾಶವ ಕೂಡದ ಮುನ್ನ, ಹೊರಗೆ ಆಕಾಶ ಇದೆ ನಮ್ಮೊಳಗೆ ಆಕಾಶ ಇದೆ. ಆಕಾಶ ನಮ್ಮೊ ಳಗೆ ಇರುವುದರಿಂದ ನೀರು ಆಹಾರ, ಗಾಳಿ ಇವುಗಳನ್ನು ಒಳಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಒಳಗೆ ಆಕಾಶ ಇಲ್ಲ ಯಾವ ವಸ್ತುಗಳೂ ಒಳಗೆ ಹೋಗುವುದಿಲ್ಲ ಜೀವ ಹೋದ ಕಾಲಕ್ಕೆ ಒಳಗಿನ ಆಕಾಶ, ಹೊರಗಿನ ಆಕಾಶದೊಂದಿಗೆ ಬಯಲಾಗು ಇದೆ. ಆಗ ನಾವು ಇರುವುದಿಲ್ಲ. ಆದುದರಿಂದ ಈ ಎಲ್ಲ ಇಂದ್ರಿಯಗಳು ಇರುವಾಗ ಭಕ್ತಿ ಮಾಡಬೇಕೆಂದು ಅಕ್ಕಮಹಾದೇವಿಯವರು ನಮಗೆ ತಿಳಿವಳಿಕ ಹೇಳಿದ್ದಾರೆ.

3). ಪಚ್ಚೆಯ ನೆಲಗಟ್ಟು ಕನಕದ ತೋರಣ, ವಜ್ರದ ಕಂಭ, ಹವಳದ ಚಪ್ಪರವಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ ಮದುವೆಯ ಮಾಡಿದರು ಎಮ್ಮವರೆನ್ನ ಮದುವೆಯ ಮಾಡಿದರು . ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯಮಾಡಿದರು.

## ಪದಗಳ ಅರ್ಥ

ಪಚ್ಚೆ ಪಚ್ಚೆಕಲ್ಲು-- ನವರತ್ನದಲ್ಲಿ ಒಂದು.
ನೆಲಗಟ್ಟು- ನೆಲಕ್ಕೆ ಹಾಸಿದ ಕಲ್ಲು.
ಕನಕ-ಚಿನ್ನ
ಹವಳ- ನವ ರತ್ನಗಳಲ್ಲಿ ಒಂದು ಮುತ್ತು ಮಣಿಕ್ಯ-ನವರತ್ನಗಳು.
ಮೇಲು ಕಟ್ಟು-ಲಗ್ನ ಮಂಟ ಪದ ಮೇಲಿನ ಅಲಂಕಾರ .
ಕಂಕಣ- ಲಗ್ನದ ಕಾಲಕ್ಕೆ ವಧುವರರಿಗೆ ಕೈಗೆ ಕಟ್ಟುವ ಅಕ್ಕಿಅರಿಸಿನ ಹಾಕಿಕಟ್ಟಿದ ಬಟ್ಟೆಯ ಸಣ್ಣ ಗಂಟು.ಸತಿ ಪತಿ ಸಂಕೇತದ ಬಟ್ಟೆಯಗಂಟು.
ಕೈದಾರ- ಅರಿಸಿನ ಹಚ್ಚಿದ ನೂಲಿನ ದಾರಕ್ಕೆ ಒಂದುಹೂ ಪೋಣಿಸಿ ವಧು ತರರು ಪರಸ್ಪರ ಕಟ್ಟುವ ನೂಲಿನ ದಾರ. ಮದುವೆ ಸಂಬಂಧ ಸೂಚಿಸುವುದು.

## ವಚನದ ಅರ್ಥ

ಅಕ್ಕಮಹಾದೇವಿಯವರ ತಂದೆ ಮುತ್ತು ರತ್ನದ ವ್ಯಾಪಾರಿಗಳು ದಿನ ಕಣ್ಣಿನಲ್ಲಿ ನವರತ್ನಗಳನ್ನು ಕಂಡಿದ್ದರು.ಅದರಂತೆಯೆ, ಅವರ ಕಲ್ಪನೆಯ ಸಿರಿವಂತಿಕೆ ಮದುವೆಯ ವಚನ.
ಪಚ್ಚೆಯ ನೆಲಗಟ್ಟು ಕನಕದ ತೋರಣ ವಜ್ರದ ಕಂಭ . ಎಂಥ ವೈಭವದ ಲಗ್ನ ಮಂಟಪ. ಪಚ್ಚೆ ಕಲ್ಲು ಹಾಸಿದ್ದರು. ಚಿನ್ನದ ತೋರಣ ಕಟ್ಟಿದ್ದರು. ವಜ್ರದ ಕಂಬಗಳನ್ನು ನೆಟ್ಟಿದ್ದರು. ಹವಳದ ಚಕಪ್ಪರವಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ ಮದುವೆಯ ಮಾಡಿದರು, ಎಮ್ಮವರೆನ್ನ ಮದುವೆಯ ಮಾಡಿದರು . ಚಪ್ಪರಕ್ಕೆ ಹವಳ ಹಾಸಿದರು . ಚಪ್ಪರದ ಚತ್ತಿಗೆ ಮುತ್ತು ಮಾಣಿಕ್ಯದಿಂದ ಮೇಲುಕಟ್ಟಕಟ್ಟಿದ್ದರು ಎಮ್ಮವರನ್ನ ಮದುವೆಯ ಮಾಡಿದರು. ಶರಣರೆಲ್ಲ ಕೂಡಿ ಲಗ್ನ ಮಾಡಿದರು. ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ ಚೆನ್ನಮಲ್ಲಿಕಾರ್ಜುನ ಗಂಡಂಗೆನ್ನ ಮದುವೆಯ ಮಾಡಿದರು. ಕಂಕಣ ಕಟ್ಟಿದರು. ಕೈದಾರ ಕಟ್ಟಿಸಿದರು. ಲಗ್ನ ಸ್ಥಿರವಾಗಲಿ ಎಂದು ಗುರುಹಿರಿಯರು ಅಕ್ಷತೆ ಹಾಕಿದರು. 'ಈ ವಚನದಲ್ಲಿ ಪರಮಾತ್ಮ ಚೆನ್ನ ಮಲ್ಲಿಕಾರ್ಜುನನೊಂದಿಗೆ ಲಗ್ನ ವಾದ ಲಗ್ನ ಮಂಟಪದ ಚಿತ್ರಣ ಇಲ್ಲಿದೆ. ಅವರ ಬಾಳಿನಲ್ಲಿ ಲೌಕಿಕರಿಗೆ ಆಗುವಂತೆ ಲಗ್ನ ನಡೆಯಲಿಲ್ಲ. ಅವರ ಬಾಳಿನಲ್ಲಿ ನಡೆದುದು ಅನುಭಾವದ ಮದುವೆ . ಇಷ್ಟಲಿಂಗ ದೀಕ್ಷೆ. ಪರಮಾತ್ಮನಿಗೆ ವಧು ನಾನು ಎಂದು ನಂಬಿದ್ದ

ಅಕ್ಕಮಹಾದೇವಿಯವರು ಪರಮಾತ್ಮನೊಂದಿಗೆ ನಡೆದ ಲಗ್ನದ ವೈಭವದ ಚಿತ್ರಣ ಇಲ್ಲಿ ಕೊಟ್ಟಿದ್ದಾರೆ. ಯಾವ ಕವಿಗಳೂ ಕೊಡಲಾಗದ ಲಗ್ನದ ಅಮೋಘ ಚಿತ್ರಣ ಇಲ್ಲಿದೆ. ಪಚ್ಚೆಯ ನೆಲೆಗಟ್ಟು. ಕನಕದ ತೋರಣ ವಜ್ರದ ಕಂಭ. ಪಚ್ಚೆಯ ಕಲ್ಲು ಹಾಸಿತ್ತು. ಬಂಗಾರದ ತಳಿರು ತೋರಣ ಕಟ್ಟಿದ್ದರು.ವಜ್ರದ ಕಂಭ ನೆಟ್ಟಿದ್ದರು. ಹವಳದ ಚಪ್ಪರವಿಕ್ಕಿ ಮುತ್ತು ಮಾಣಿಕದ ಮೇಲಕಟ್ಟ ಕಟ್ಟಿದ್ದರು. ಹಸಿರು ಗರಿ, ಹಸಿರು ತೋರಣ ಒಣಗುತ್ತದೆ. ಹವಳದ ಚಪ್ಪರ ಹಾಕಿದ್ದರು .ಬಾಡಲಾರದ ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ ಅಲಂಕಾ ರಗೊಳಿಸಿದ್ದರು. ಬೆಳ್ಳನೆಯ ಪಚ್ಚೆಕಲ್ಲು ಹಾಸಿದ್ದರು ಚೆನ್ನಮಲ್ಲಿಕಾರ್ಜುನ ವರ ನಾನು ವಧು. ಗುರುಗಳು ಅನುಭಾವಿಗಳುಸೇರಿ ಕಂಕಣ ಕೈದಾರ ಕಟ್ಟಿಸಿದರು ಅಕ್ಷತೆ ಹಾಕಿ ಆಶೀರ್ವದಿಸಿದರು. ಪರಮಾತ್ಮ ಚೆನ್ನಮಲ್ಲಿಕಾರ್ಜುನನೊಂದಿಗೆ ಲಗ್ನ ಮಾಡಿ ಕೊಂಡ ವೈಭವದ ಚಿತ್ರಣ, ಬದುಕುವ ಜೀವನ ಪ್ರೀತಿ ಎಷ್ಟೊಂದು ಉಜ್ವಲವಾಗಿದೆ. ಅವರ ಮನಸ್ಸಿಗಾದ ದೊಡ್ಡ ಘಾತವೇ ಅಪಾರ ವೈರಾಗ್ಯಕ್ಕೆ ಮುನ್ನುಡಿಯಾಯಿತು.

4) ಪಂಚೇಂದ್ರಿಯದ ಉರವಣೆಯಹುದು.
ಮದದ ಭರದ ಜವ್ವನದ ಒಡಲು ,ವೃಥಾ ಹೋಯಿತ್ತಲ್ಲಾ
ತುಂಬಪರಿಮಳವನೆ ಕೊಂಡು ಲಂಬಿಸುವ ತೆರನಂತೆ ಇನ್ನೆಂದಿಂಗೆ ಒಳಕೊಂಬೆಯೊ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಪಂಚೇಂದ್ರಿಯ-ಕಿವಿ,ಚರ್ಮ, ಕಣ್ಣು,ನಾಲಗೆ,ಮೂಗು.
ಉರವಣೆ-ಉಪಟಳ, ಅಬ್ಬರ,
ಮದ-ತಾರುಣ್ಯದ ಮದ.
ಭರ-ಅಲೆ,
ವೃಥಾ-ವ್ಯರ್ಥ, ಲಂಬಿಸು-ಜಿಗಿ ,ಹಾರು,
ಒಳಕೊಂಬೆ-ಸ್ವೀಕರುಸುವೆ,
ಪರಿಮಳ-ಮಕರಂದ.

## ವಚನದ ಅರ್ಥ

ಪಂಚೇಂದ್ರಿಯದ ಉರವಣೆಯಹುದು. ಮದದ ಭರದ ಜವ್ವನದ ಒಡಲು ವೃಥಾ ಹೋಯಿತ್ತಲ್ಲಾ ಐದು ಇಂದ್ರಿಯಗಳ ದಬಾವಣೆಯ ತಾರುಣ್ಯದ ಒಡಲಿದು. ಯೌವನದ ಅಲೆ ಉಕ್ಕಿ ವ್ಯರ್ಥ ಹೋಗುತ್ತಿದೆ.ತುಂಬಿ ಪರಿಮಳವನೆ ಕೊಂಡು ಲಂಬಿ ಸುವ ತೆರನಂತೆ ಇನ್ನೆಂದಿಂಗೆ ಒಳಕೊಂಬೆಯೊ ? ತುಂಬಿಯು ಹೂವಿನ ಮಕರಂದವನ್ನು ಹೀರಿ ಹಾರುತ್ತದೆ. ಹಾಗೆ ಪರಮಾತ್ಮನೆ ನೀನು ಎಂದು ಭಕ್ತಿಯನ್ನು ಸ್ವೀಕರಿಸುವೆ. ಅಕ್ಕಮಹಾದೇವಿಯವರಂತೆ (ಅಕ್ಕಮಹಾದೇವಿಯವರ ನಂತರ,ಬಂದವರು ಮಿರಾಬಾಯಿ, ಲಲ್ಲೇಶ್ವರಿ, ಬೊಂತಾದೇವಿ ಇತ್ಯಾದಿ ಅನುಭಾವಿಗಳು ದೇವರನ್ನೆ ಪತಿಯನ್ನಾಗಿ ಪಡೆಯಬೇಕೆಂದು ಹಂಬಲಿಸಿದರು).ಆದರೆ ಅಕ್ಕಮಹಾದೇವಿಯವರದು ತೀರ ಉತ್ಕಟ ವೈರಾಗ್ಯ. ತುಂಬ ತೊಡ ಕಿನದು.ಶಿವ-ಶಿವೆಯರು ಅಂಗರತಿ ಅನುಭವಿಸಿದಂತೆ ರತಿಭೋಗವನ್ನು ಪರಮಾ ತ್ಮನೊಂದಿಗೆ ಪಡೆಯಬೇಕೆಂಬ ಪರಾಕಾಷ್ಠೆಯ ಹಂಬಲ ಹೊಂದಿದ್ದರು. ಇಂತಹ ಭೌತಿಕ ಸುಖ, ಭೋಗಗಳು ಮನುಷ್ಯನು ಕಟ್ಟಿದ್ದ ಕಥೆಗಳಾದುದರಿಂದ ಮುಗ್ಧ ಭಕ್ತರು ದಿಕ್ಕು ತಪ್ಪಿದ ಜೀವನ ನಡೆಸಬೇಕಾಯಿತು ದೇವರನ್ನೆ ಪತಿಯನ್ನಾಗಿಪಡೆಯಬಹು ದೆಂಬುದು ಕೇವಲ ಕಥೆಯ ಸತ್ಯ. ಇದು ಸತ್ಯವಾದೊಡನೆ ಅಕ್ಕನವರನ್ನು ವಿಷಾದ ಯೋಗ ಆವರಿಸಿತು.ವಿರಹ-ವಿಷಾದವಾದಕಥೆ ಅಕ್ಕನವರದು. ಜೀವನದ ಕಟುಸತ್ಯಗಳು ಒಪ್ಪಿಕೊಳ್ಳಲು ಎಷ್ಟೇ ಕಷ್ಟವಾದರೂ ಒಪ್ಪಿಕೊಳ್ಳುವುದು ಅನಿವಾರ. ಇಂತಹ ಸ್ಥಿತಿಗೆ ಸಿಕ್ಕಿದ ಅಕ್ಕನವರು ಪರಿತಾಪದಿಂದ ತಮ್ಮ ಸ್ಥಿತಿಯನ್ನು ಈವಚನದಲ್ಲಿಟ್ಟಿದ್ದಾರೆ. ನನ್ನ 5 ಜ್ಞಾನೇಂದ್ರಿಯಗಳು ನಿನಗಾಗಿ ತವಕಿಸುತ್ತಿವೆ. ತಾರುಣ್ಯದ ಅಲೆಗಳು ಏಳುತ್ತಿವೆ. ಯೌವನ ವೃಥಾ ವ್ಯರ್ಥವಾಗುತ್ತಿದೆ.ಈದೇಹದ ಭೋಗವನ್ನು ನಿನ್ನೊಂದಿಗೆ ಅನುಭವಿಸಬೇಕೆಂದಿದ್ದೇನೆ. ತುಂಬಿ ಪರಿಮಳವನ್ನು ಸ್ವೀಕರಿಸಿ ಹಾರುವಂತೆ ನೀನು ಸ್ವೀಕರಿಸು ಬಾ. ನನ್ನನ್ನು ನಿನ್ನಲ್ಲಿ ಎಂದಿಗೆ ಒಳಕೊಳ್ಳುವೆ. ಅಂಗಲಿಂಗೈಕ್ಯದ ಸುಖ ಸವಿಯನ್ನುಅನುಭವಿಸಲು ದಾರಿನೋಡುತ್ತಿದ್ದೇನೆ. ಪರಮಾತ್ಮನನ್ನು ತುಂಬಿಗೂ ಭಕ್ತಿ, ಯೌವನವನ್ನುಪರಿಮಳಕ್ಕೂ ಜೀವಾತ್ಮನನ್ನು ಹೂವಿಗೂ ಹೋಲಿಸಿದ್ದಾರೆ..

**5) ಪ್ರಥಮದಲಾದ ಮೋಹ ಸಾತ್ವಿಕವಾದರೆ ಕಿತವೇಕಯ್ಯ? ಹೆರನೊಲ್ಲದ ಬೇಟಕ್ಕೆ ಕಿತವೇಕಯ್ಯ? ಚೆನ್ನಮಲ್ಲಿಕಾರ್ಜುನ ದೇವರದೇವನೊಂದಿಗೆ ಬಿಡದ ನೇಹಕ್ಕೆ ಕಿತ ವೇಕಯ್ಯ?**

## ಪದಗಳ ಅರ್ಥ

ಮೋಹ-ಮಮಕಾರ,
ಕಿತ-ತಪ್ಪು ದೋಷ.
(ಹೆರ)ಪೆರ -ಇನ್ನೊಂದು,
ಬೇಟ-ಪ್ರೀತಿ.
ನೇಹ -ಪ್ರೀತಿ.

## ವಚನದ ಅರ್ಥ

ಪ್ರಥಮದಲಾದ ಮೋಹ ಸಾತ್ವಿಕವಾದರೆ ಕಿತವೇಕಯ್ಯ? ಮೊದಲ ಮೋಹ ಸಾತ್ವಿಕವಾದರೆ ಅಲ್ಲಿ ದೋಷವೇನು? ಈ ಪ್ರೀತಿ ಪರಮಾತ್ಮನ ಕಡೆಗೆ ಹೊರಳಿದೆ. ಆಗ ಇದನ್ನೆ ಭಕ್ತಿ ಎನ್ನ ಲಾಗುತ್ತದೆ. ಈ ಮೋಹ ಸಾತ್ವಿಕವಾದುದರಿಂದ ಇಲ್ಲಿ ದೋಷವೇನು ಎಂದು ಅಕ್ಕ ಕೇಳುತ್ತಿದ್ದಾರೆ. ಪೆರನೊಲ್ಲದ ಬೇಟಕ್ಕೆ ಕಿತವೇಕಯ್ಯ? ಚೆನ್ನಮಲ್ಲಿಕಾರ್ಜುನನೊಲ್ಲದ ಬೇಟಕ್ಕೆ ಕಿತವೇಕಯ್ಯ? ಮತ್ತೊಂದು ಪ್ರೇಮವನ್ನು ಒಲ್ಲೆ ಎಂದರೆ ದೋಷವೇನು? ಪರಮಾತ್ಮ ಚೆನ್ನಮಲ್ಲಿಕಾರ್ಜುನನೆ ನನ್ನ ನಲ್ಲ ಎಂದು ಹಠಹಿಡಿದರೆ ಅಲ್ಲಿ ದೋಷ ವೇನು? ವಚನದಲ್ಲಿ ಮೋಹ, ನೇಹ,ಬೇಟ ಇವುಗಳ ವ್ಯಾಖ್ಯೆಯನ್ನು ಪ್ರೀತಿಯ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನ ದೇವರನ್ನು ಪ್ರೀತಿಸಿದರು. ಎಲ್ಲರೂ ದೇವರನ್ನು ಪೂಜಿಸಿ ಯಾಂತ್ರಿಕ ನೆಲೆಯಲ್ಲಿಯೆ ತೃಪ್ತಿ ಹೊಂದುತ್ತಾರೆ.ಆದರೆ ಅಕ್ಕಮಹಾದೇವಿಯವರು ಅದನ್ನು ವಾಸ್ತವವಾಗಿ ಪಡೆಯಲು ಪ್ರಯತ್ನಿಸಿದರು. ಇದು ಕೂಡದು, ಸಾಧ್ಯವಿಲ್ಲ ಎಂದು ಲೋಕ ಹೇಳುತ್ತದೆ .ಇದು ಯಾಕೆ ಸಾಧ್ಯವಿಲ್ಲ? ಅದನ್ನು ನಾನು ಪಡೆದೆ ತೀರುತ್ತೇನೆ ಎಂಬುದು ಅಕ್ಕನವರ ಇಚ್ಛೆ. ಇದು ಪ್ರೀತಿಯ ವಿಷಯವೂ ಹೌದು. ಅಲೌಕಿಕ ಅನುಭಾವವೂ ಹೌದು. ಈಪ್ರೀತಿಯ ವಿಷಯ ಇಲ್ಲಿ ಚರ್ಚೆಯಾಗಿದೆ. ಮೊದಲ ಸಲ ಉಂಟಾದ ಪ್ರೀತಿ ಸಾತ್ವಿಕವಾಗಿದ್ದರೆ ಅಲ್ಲಿ ದೋಷವೇನು? ಈ ಮೋಹ ಚೆನ್ನಮಲ್ಲಿಕಾರ್ಜುನನನ್ನು ಪಡೆಯಲು ಪ್ರಥಮ ಬಾರಿಗೆ ಆಗಿದೆ. ಇಲ್ಲಿ ತಪ್ಪೇನು? ಅವನನ್ನು ಪಡೆಯುವುದು ಹುಚ್ಚು ಎಂದು ನಿಮಗನ್ನಿಸಿದರೆ ಅದು ಹೆಚ್ಚು ಎಂದು ನನಗನ್ನಿಸಿದೆ. ನಮ್ಮ ಪ್ರೀತಿ ಸಾತ್ವಿಕವಾಗಿದ್ದರೆ ಅಲ್ಲಿ ದೋಷವೇನು ? ಹೆರರನೊಲ್ಲದ ಬೇಟಕ್ಕೆ ಕಿತವೇಕಯ್ಯ? ಪರಮಾತ್ಮನ ಪ್ರೀತಿಯನ್ನುಳಿದು ಇನ್ನೊಂದು

ಲೌಕಿಕ ಪ್ರೀತಿ ಬೇಡ ಎಂದರೆ ಅಲ್ಲಿ ದೋಷವೇನು ಇಲ್ಲ. ನಾವು ಪ್ರೀತಿಸದೆ ಹೆರರು ನಮ್ಮನ್ನು ಸ್ವಾರ್ಥದಿಂದ ಪ್ರೀತಿಸಿದಾಗ ಅದನ್ನು ನಾವು ನಿರಾಕರಿಸಿದರೆ ಅಲ್ಲಿ ದೋಷವೇನು ಇಲ್ಲ. ನನ್ನ ಪ್ರೀತಿಯು ಪರಮಾತ್ಮನನ್ನು ಎಂದೆಂದೂ ಬಿಡದ ರೀತಿಯಲ್ಲಿ ಪ್ರೀತಿಸುವುದಾಗಿದೆ. ಇದರಲ್ಲಿ ದೋಷವೇನೂ ಇಲ್ಲ. ಈ ಪ್ರೀತಿ ಭಕ್ತಿಯೂ ಹೌದು. ಈಶಾಶ್ವತ ಭಕ್ತಿಯನ್ನು ಅಕ್ಕನವರು ನಡೆಸಿದರು. ಇದು ಪ್ರೀತಿಯೂ ಹೌದು. ಭಕ್ತಿಯೂ ಹೌದು.

6) ಫಲ ಒಳಗೆ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು. ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ. ಇದಕ್ಕೆ ನೋವೇಕೆ ? ಕಾಡದಿರಣ್ಣ ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳ.

## ಪದಗಳ ಅರ್ಥ

ಪಕ್ವ-ಮಾಗು.
ಕಾಮನ ಮುದ್ರೆ- ಲೈಂಗಿಕ ಅವಯವಗಳು.

## ವಚನದ ಅರ್ಥ

.ಫಲ ಒಳಗೆ ಪಕ್ವ ವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು. ಹಣ್ಣು ಒಳಗೆ
ಮಾಗದವರೆಗೆ ಹೊರಗಿನ ಸಿಪ್ಪೆ ಬಿಡಿಸಲು ಬರುವುದಿಲ್ಲ.ಹಾಗೆ ಸೀರೆಯ ಹಂಗು ಕಳೆದುಕೊಳ್ಳಬೇಕಾದರೆ ಒಳಗೆ ಪಕ್ವತೆ ಬೇಕು. ಕಾಮನ ಮುದ್ರೆಯಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ. ಕೂದಲು ಮುಚ್ಚಿದ್ದೇಕೆ? ನನಗಾಗಿ ಯಲ್ಲ ನಿಮಗಾಗಿ . ಈ ಕಾಮನ ಮುದ್ರೆಗಳು ನಿಮಗೆ ನೋವುಂಟು ಮಾಡಬಹುದು. ಆಕಾರಣ ಮುಚ್ಚಿದೆ. ಇದಕ್ಕೆ ನೋವೇಕೆ? ಕಾಡದಿರಣ್ಣ ಚೆನ್ನಮಲ್ಲಿಕಾರ್ಜುನ.

ದೇವರ ದೇವನ ಒಳಗಾದವಳ. ನಿಮಗೆ ನೋವೇಕೆ? ಕಾಡಬೇಡಿರಿ. ನಾನು ಚೆನ್ನಮ ಲ್ಲಿಕಾರ್ಜುನದೇವರ ಹಂಬಲದವಳು. ಅಕ್ಕಮಹಾದೇವಿಯವರಿಗೆ ಮತ್ತೆ ಮತ್ತೆ ನೋವುಂಟು ಮಾಡುವ

ಪ್ರಸಂಗಗಳೆ ಎದುರಾಗುತ್ತಿವೆ. ಆದರೂ ಸಹನೆಯಿಂದ ಉತ್ತರಕೊಟ್ಟು ಎಲ್ಲ ಕಹಿ ಪ್ರಸಂಗಗಳನ್ನು ತಾಳ್ಮೆಯಿಂದ ಎದುರಿಸಿ ಗೆದ್ದಿದ್ದಾರೆ. ನಿಜಕ್ಕೂ ಅಕ್ಕನವರ ವ್ಯಕ್ತಿತ್ವ ಮಹೋನ್ನತವಾದುದು. ಲೋಕದಲ್ಲಿ ಉದ್ದಕ್ಕೂ ಕಠಿನ ಪ್ರಸಂಗ ಗಳನ್ನು ಎದುರಿಸಿ ಬಂದುದಾಯಿತು ಕಲ್ಯಾಣದಲ್ಲಿ ಕೂಡ ಅಂತಹದೆ ಕಹಿ ಪ್ರಸಂಗಗಳು ಎದುರಾದುದು ವಿಷಾದದ ಸಂಗತಿಯೆ ಸರಿ. ಹೆಣ್ಣು ಎನ್ನುವ ಕಾರಣಕ್ಕೆ ಎಷ್ಟು ಕಹಿ ಪ್ರಸಂಗಗಳನ್ನು ಎದುರಿಸಬೇಕು. ನೀವು ಅನುಭಾವಮಾರ್ಗದಲ್ಲಿ ಸಾಧನೆ ಮಾಡಿರುವಿರಿ ಎನ್ನುವುದಕ್ಕೆ ಏನು ಆಧಾರ? ನಿನ್ನ ವೈರಾಗ್ಯ ಸಹಜವ್ರೊ? ಅನುಭಾವದ ಹಂಬಲ ದಿಟವ್ರೊ? ಉತ್ತರ ಕೊಡಬೇಕಾಗಿದೆ. ಇದನ್ನು ಕೇಳಲು ನೀನಾರು? ಎಂದು ಅಕ್ಕನವರು ಯಾರಿಗೂ ಹೇಳಲಿಲ್ಲ. ಹೆಣ್ಣನ್ನು ಅನುಭಾವದಿಂದ ಹೊರಗಿಟ್ಟ ಧರ್ಮಗಳು, ಹೆಣ್ಣು ಅದನ್ನು ಸಾಧಿಸಿ ತೋರಿಸಿದಾಗ ಆನಂಪಡಬೇಕು.

ಪುರುಷಜಗತ್ತು ಧರ್ಮವನ್ನು ಗುತ್ತಿಗೆ ಹಿಡಿದ ಹಾಗೆ ವರ್ತಿಸಿದ್ದು ಸರಿಯಲ್ಲ. ಅನುಭವ ಮಂಟಪಕ್ಕೆ ಸ್ವಾಗತಿಸಿದ್ದು ಇಂತಹವರಿಗೆ ಸಹಿಸುವುದಾಗಲಿಲ್ಲ. ಈ ಪ್ರಸಂಗವನ್ನು ದೂರುತ್ತನಿಂದಿಸತೊಡಗಿದರು. ಇದನ್ನು ತಿಳಿದ ಪ್ರಭುದೇವರು ಅಂತಹ ಮೂರ್ಖರಿಗೆ ಒಳ ಏಟುಗಳನ್ನು ನೀಡುವಂತೆ ಅಕ್ಕನವರಿಂದ ಉತ್ತರ ಕೊಡಿಸಿದ್ದಾರೆ ಅಮೋಘವಾದ ಉತ್ತರ ಅಕ್ಕನವರ ವಚನಗಳಲ್ಲಿ ಪ್ರಕಟವಾದವು. ಫಲ ಒಳಗೆ ಪಕ್ವ ವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು. ಸಿಪ್ಪೆ ಯಾವಾಗ ಹಣ್ಣಿನಿಂದ ಬೇರೆಯಾಗುತ್ತದೆ. ಫಲ ಹಣ್ಣಾದಾಗ ಕಳಿತಾಗ. ಸಿಪ್ಪೆ ತಂತಾನೆ ಹಗುರ ಸುಲಿದು ಕೊಳ್ಳುತ್ತದೆ. ಕಾಮನಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ. ವಸ್ತ್ರತೆಗೆದ ಶರೀರವನ್ನು ಕೂದಲಿಂದ ಮರೆಮಾಚಿದ್ದು ನನ ಗಾಗಿ ಅಲ್ಲ. ಈಶರೀರವನ್ನು ನೋಡುವ ಪುರುಷರಿಗೆ ಕಾಮನ ಮುದ್ರೆಗಳು ವಿಕಾರ ಉಂಟುಮಾಡದಿರಲಿ ಎಂದು ಮುಚ್ಚಿದೆ. ನನ್ನಲ್ಲಿ ವಿಕಾರ ಇಲ್ಲದಿದ್ದರೂ ನೋಡುವ ಕಂಗಳಲ್ಲಿ ವಿಕಾರ ಇದ್ದವರಿಗೆ ಆ ವಿಕಾರವಾಗದಿರಲಿ ಎಂದು ಅಂಗವನ್ನು ಮರೆಮಾಡಿದೆ. ಇದಕ್ಕೆ ನಿಮಗೆ ನೋವೇಕೆ? ನನ್ನನ್ನು ಕಾಡದಿರಿ ನಾನು ಚೆನ್ನಮಲ್ಲಿಕಾರ್ಜುನ ದೇವನ ಒಳಗಾದವಳು. ನಾನು ಅನುಭಾವ ಪಥದ ಹೆಣ್ಣು ಮತ್ತೆ ಮತ್ತೆ ಲೌಕಿಕ ದೃಷ್ಟಿಯಿಂದ ನೋಡದಿರಿ. ಮನುಷ್ಯ ಒಂಟಿಯಾದರೆ ಎಲ್ಲರೂ ಒರೆ ಹಚ್ಚುವವರೆ. ಅಕ್ಕನವರ ಬೆನ್ನಹಿಂದೆ ಅರ್ಥವ್ಯವಸ್ಥೆಯಿರುವ ಸ್ಥಾನಮಾನ ಇರುವ ಒಂದು ಭದ್ರ ವ್ಯವಸ್ಥೆಯಿದ್ದರೆ ಇಂತಹ ಪ್ರಶ್ನೆಗಳು ಎದುರಾಗುತ್ತಿರಲಿಲ್ಲ. ವೈರಾಗ್ಯಕ್ಕೆ ಗೌರವ ಕೊಡುವ ವಿವೇಕಿಗಳು ಎಲ್ಲ ಕಾಲಕ್ಕೂ

ಕಡಿಮೆಯೆ. ಗುರು, ಜ್ಞಾನಿಗಳಲ್ಲಿ ಕೂಡಿ ಸಂಪತ್ತು ಅಧಿಕಾರ ನೋಡುತ್ತಾರೆ ಎಂದರೆ ಇಂತಹ ಜನರಿಗೆ ಏನು ಹೇಳಬೇಕು.
ಅದಕ್ಕಾಗಿಯೆ ಪ್ರಭುದೇವರು ಅಷ್ಟೊಂದುಜ್ಞಾನಿಗಳಾದರೂ ಬುದ್ಧ ಮಹಾವೀರ ರಂತೆ ಪ್ರಸಿದ್ಧಿಯಾಗಲಿಲ್ಲ. ಬುದ್ಧನನ್ನು ಅಶೋಕ ಬಿಂದುಸಾರ ಚಕ್ರವರ್ತಿಗಳು ಗೌರವಿಸಿದರು ಎಂದು ಬುದ್ಧನಿಗೆ ಮನ್ನಣೆ ದೊರೆಯಿತು. ಪ್ರಭುದೇವರಿಗೆ ಚಂದ್ರಗುಪ್ತ ಅಶೋಕನಂತಹ ಚಕ್ರವರ್ತಿಗಳು ಸಿಗದಿದ್ದುದು ಒಂದು ಕಾರಣ. ಅಕ್ಕನವರದು ಎಂತಹ ಉನ್ನತ ವ್ಯಕ್ತಿತ್ವ. ಆದರೆ ಇಂದು ಬರೆಯುವಾಗ ಮಾತನಾಡುವಾಗ ಅಕ್ಕಮಹಾದೇವಿಯವರನ್ನು ಏಕವಚನದಲ್ಲಿ ಉಲ್ಲೇಖಿಸುವ ವರಿಗೆ ಮೊದಲು ತಿಳಿಹೇಳಬೇಕಾಗಿದೆ. ಇದು ಪ್ರಚಾರಯುಗ. ಒಬ್ಬರು ಗೌರವಿಸಿದರು ಎಂದು ಇನ್ನೊಬ್ಬರು ಗೌರವಿಸುತ್ತಾರೆ. ಜ್ಞಾನಿಗಳನ್ನು ಜ್ಞಾನಕ್ಕಾಗಿಯೆ ಗೌರವಿಸುವಂತಾಗಬೇಕು. ಇವರು ಗೌರವಿಸಲಿ ಎಂದು ಅವರು ಜ್ಞಾನಿಗಳಾಗಲಿಲ್ಲ. ಅವರು ಪರಿಪೂರ್ಣರಾಗುವುದ ಕ್ಕಾಗಿಯೆ ಜ್ಞಾನಮಾರ್ಗಕ್ಕೆ ಬಂದರು. ಯಾರು ಗೌರವಿಸಿದರೇನು? ಬಿಟ್ಟರೇನು?

7) ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು
ಲೋಕವೆಂಬ ಮಾಯೆಗೆ ಶರಣರ ಚಾರಿತ್ರ್ಯ ಮರುಳಾಗಿ
ತೋರುವುದು ಚೆನ್ನಮಲ್ಲಿಕಾರ್ಜುನ ಒಲಿದವರಿಗೆ ಮಾಯೆಯಿಲ್ಲ.
ಮರಹಿಲ್ಲ ಅಭಿಮಾನವೂ ಇಲ್ಲ.

## ಪದಗಳ ಅರ್ಥ

ಮಾಯೆ -ಸೆಳೆಯುವ ಒಂದು ಆಕರ್ಷಣ ಶಕ್ತಿ.
ಅಭಿಮಾನ - ಪ್ರತಿ ಶಕ್ತಿ. ಸ್ವಾಭಿಮಾನ ನಾನು ಎನ್ನುವ ಅಭಿಮಾನ. ಪರ್ಯಾಯ ಶಕ್ತಿ.
ಚಾರಿತ್ರ್ಯ-ನಡವಳಿಕೆ, ವ್ಯಕ್ತಿತ್ವ,
ಮರುಳು-ಹುಚ್ಚು.
ಮರಹು-ಅಜ್ಞಾನ, ವಿವೇಕ ಹೋಗುವುದು. ನೆನಪು ಆರುವುದು.

## ವಚನದ ಅರ್ಥ

ಇದು ತುಂಬ ಸುಂದರವಾದ ವಚನ. ಲೋಕ, ಪುರುಷಸ್ತ್ರೀಯನ್ನು ಕುರಿತಾದ ಭಾಷ್ಯ ಈ ವಚನ ಎನ್ನಬಹುದು. ಶರಣರನ್ನು ಲೋಕ, ಪುರುಷ, ಇವರೊಂದಿಗೆ ಮೌಲ್ಯ ನಿರ್ಣಯ ಮಾಡಲಾಗಿದೆ. ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು. ಮಾಯೆ ಎನ್ನುವುದು ಒಂದು ಸೆಳೆಯುವ ಶಕ್ತಿ. ಇದು ಪುರುಷನ ಮುಂದೆ ಸ್ತ್ರೀಯಾಗಿ ಸುಳಿದು ಇವನನ್ನು ಬಡಿದೆಬ್ಬಿಸುತ್ತದೆ. ಸ್ತ್ರೀ ಶಕ್ತಿ ಕಪುರುಷನಿಗೆ ಪರ್ಯಾಯವಾಗಿ ಸುಳಿದು ಸಮಾನಂತರ ಶಕ್ತಿಯಾಗಿ ಕಾಡು ತ್ತದೆ. ಆಗ ಈತ ಆ ಶಕ್ತಿಯನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕೆಂದು ಹುರುಡು ಕಟ್ಟ ತಾನೆ . ಇಲ್ಲ ಅದನ್ನು ಮಣಿಸಬೇಕೆಂದು ನಿರ್ಧಾರಮಾಸುತ್ತಾನೆ. ಇದು ಮಾಯೆ ಮನುಷ್ಯ ಮನಸ್ಸಿನಲ್ಲಿ ತರುವ ತಲ್ಲಣ. ಸ್ತ್ರೀಯಮುಂದೆ ಮಾಯೆ ಪುರುಷನೆಂಬ ಅಭಿ ಮಾನವಾಗಿ ಕಾಡಿತ್ತು. ಹಾಗೆ ಸ್ತ್ರೀ ಗೆ ಕೂಡ ಈ ಪುರುಷ ಪರ್ಯಯ ಶಕ್ತಿಯಾಗಿ ಕಾಡುತ್ತಾನೆ. ಸ್ತ್ರೀ ಕೂಡ ಈ ಶಕ್ತಿಯನ್ನು ಮಣಿಸಬೇಕು . ವಶಮಾಡಿಕೊಳ್ಳಬೇಕು ಎಂಬಿತ್ಯಾದಿ ವಿಚಾರಕ್ಕೆ ಒಳಗಾಗುತ್ತಾಳೆ. ಪುರುಷನಿಗೆ ಸ್ತ್ರೀ ಒಂದು ಅಕರ್ಷಣ ಶಕ್ತಿ ಯಾದರೆ ಸ್ತ್ರೀಗೂ ಪುರುಷ ಸೆಳೆಯುವ ಒಂದು ಮಾಯಾಶಕ್ತಿ ಈ ಶಕ್ತಿಯು ಲೋಕದಲ್ಲಿದೆ ಇದು ಪುರುಷ ಮೂಲಕ ಪ್ರಕಟವಾಗುತ್ತದೆ. ಲೋಕವೆಂಬ ಮಾಯೆಗೆ ಶರಣರ ಚಾರಿತ್ರ್ಯ ಮರುಳಾಗಿ ತೋರುವುದು. ತಿಳಿದು ನೋಡಿದರೆ ಈ ಲೋಕವ ಮಾಯೆ. ಈ ಮಾಯಾಲೋಕಕ್ಕೆ ಶರಣರ ನಡೆ, ನುಡಿ,ವ್ಯಕ್ತಿತ್ವ ಹುಚ್ಚುತನವಾಗಿ ಕಾಡುತ್ತದೆ. ಚೆನ್ನಮಲ್ಲಿಕಾರ್ಜುನ ಒಲಿದವರಿಗೆ ಮಾಯೆಯಿಲ್ಲ ಮರಹಿಲ್ಲ ಅಭಿಮಾನವೂ ಇಲ್ಲ. ಪರಮಾತ್ಮ ಚೆನ್ನಮಲ್ಲಿಕಾರ್ಜುನನು ಅನುಗ್ರಹಿಸಿದವರಿಗೆ ಮಾಯೆಯಿಲ್ಲ

ಮರಹಿಲ್ಲ. ಅಭಿಮಾನವೂ ಇಲ್ಲ. ಶರಣರು ಎಂದರೆ ಚೆನ್ನಮಲ್ಲಿಕಾರ್ಜುನನ ಅನುಗ್ರಹ ಗಳಿಸಿದವರು. ಇವರು ಮಾಯೆಗೆ ಮರಹಿಗೆ ಅಭಿಮಾನಕ್ಕೆ ವಶರಾಗುವುದಿಲ್ಲ ಇವರನ್ನು ಮಾಯೆ ಸೆಳೆಯಲಾರದು. ಆಕರ್ಷಿಸಲಾರದು.ಕಾಡಲಾರದು. ಮರಹು ಇವರಿಗೆ ಆವರಿಸುವದಿಲ್ಲ. ಮರಹು ಎಂದರೆ ಇಲ್ಲಿ ಕತ್ತಲೆ, ಅಜ್ಞಾನ ಎಂದೂ ತೆಗೆದುಕೊಳ್ಳಬಹುದು. ಮನುಷ್ಯ ಆಜ್ಞಾನ ಆವರಿಸಿದಾಗ ಕೂಡ ಅನೇಕ ತಪ್ಪುಗಳನ್ನು ಮಾಡುತ್ತಾನೆ. ಅರಿವು,ವಿವೇಕ ಹೋಗುವುದೆ ಮರಹು ಎಂದು ತೆಗೆದುಕೊಳ್ಳಬೇಕು. ಈ ಮರೆವಿನಿಂದ ಲೋಕದಲ್ಲಿ ಸಾಕಷ್ಟು ತಪ್ಪುಗಳಾಗುತ್ತವೆ. ಮನುಷ್ಯನಿಗೆ ಮರೆವು

ಇಲ್ಲ ಅವನಜೀವನವು ಆನಂದಮಯವಾಯಿತೆಂದೆ ಅರ್ಥ. ಅಭಿಮಾನವೂ ಇಲ್ಲ ಶರಣರುಮಾಯೆ,ಮರಹು ಗೆದ್ದವರು ಕಳೆದುಕೊಂಡವರು ಜೊತೆಗೆ ಅಭಿಮಾನವನ್ನೂ ಕಳೆದುಕೊಂಡವರು. ಅಭಿಮಾನ ಎಂದರೆ ನಾನು ನನ್ನದು ನನ್ನ ವ್ಯಕ್ತಿತ್ವ ನನಗೆ ಇಷ್ಟು ಶಕ್ತಿ ಇದೆ . ಇತ್ಯಾದೆ ಯಾವಭಾವನೆಗಳೂ ಇರುವುದಿಲ್ಲ ವ್ಯಕ್ತಿತ್ವವಲ್ಲ ಪರಮಾತ್ಮನಲ್ಲಿ ಕರಗಿರುತ್ತದೆ. ವ್ಯಕ್ತಿಗತ ಆತ್ಮನು ಈಗ ಪಿಂಡಗತ ಎನ್ನುವ ಅಭಿಧಾನವನ್ನು ಕಳೆದುಕೊಂಡು ಬ್ರಹ್ಮಾಂಡಗತ ಆತ್ಮದ ಬಯಲಾಗಿರುತ್ತಾನೆ. ಕಾಣಲು ಶರೀರದ ಸುಳುಹು ಇರುತ್ತದೆ. ಅಲ್ಲಿ ಮಾಯೆ ಮರಹು ಅಭಿಮಾನಗಳು ಇರುವುದಿಲ್ಲ. ಒಂದು ಮಗುವಿನಂತೆ ಇರುತ್ತಾರೆ. ಮಗುವಿಗೆ ಮುಗ್ದಮನಸ್ಸಿದೆ. ಅರಿವಿರುವುದಿಲ್ಲ. ಈ ಶರಣರು ಅರಿವಿದ್ದೂ ಮುಗ್ದ ಮಗು ಇದು ಮಾಯೆ, ಮರಹು ಅಭಿಮಾನಗೆದ್ದ ನಿರಸನಗೊಳಿಸಿಕೊಂಡ ಇರವು ಶರಣ ಎಂದರೆ ಪರಿಪೂರ್ಣತ್ಮಕ್ಕೆ ಶರಣಾದವನು. ವ್ಯಕ್ತಿತ್ವವನ್ನು ಪೂರ್ಣ ಒಪ್ಪಿಸಿಕೊಂಡಮೇಲೆ ಅಲ್ಲಿ ಏನೂ ಇಲ್ಲ.

8) ಪಂಚೇಂದ್ರಿಯಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ?
ಸಪ್ತವ್ಯಸನಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ??
ರತ್ನದ ಸಂಕೋಲೆಯಾದರೇನುಬಂಧನವಲ್ಲವೆ?
ಚೆನ್ನಮಲ್ಲಿಕಾರ್ಜುನ.

## ಪದಗಳ ಅರ್ಥ

ಪಂಚೇಂದ್ರಿಯ -ಮೂಗು, ನಾಲಿಗೆ,ಕಣ್ಣು, ಚರ್ಮ,ಕಿವಿ.
ಸಪ್ತವ್ಯಸನ-ತನು,ಮನ, ಧನ,ಸ್ತ್ರೀ,ಜೂಜು,ಅಧಿಕಾರ, ಮದ್ಯ,
ಸಂಕೋಲೆ-ಕೋಳ,ಬೇಡಿ.
ಬಂಧನ-ಸೆರೆ

## ವಚನದ ಅರ್ಥ

ಪಂಚೇಂದ್ರಿಯಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ? ಮನುಷ್ಯ ನಾಶ ವಾಗುವುದಕ್ಕೆ ಎಲ್ಲ ಇಂದ್ರಿಯಗಳಿಗೆ ದಾಸನಾಗಬೇಕೆಂದೇನೂ ಇಲ್ಲ. ಇವನು ಹಾಳಾಗಲಿಕ್ಕೆ ಒಂದೇ ಇಂದ್ರಿಯ ಸಾಕು. ನಮಗೆ ಐದು ಇಂದ್ರಿಯಗಳಿವೆ ಇವುಗಳಲ್ಲಿ

ಯಾವುದಾದರೂ ಒಂದು ಇಂದ್ರಿಯಕೆ ವಶವಾದರೂ ಸಾಕು. ನಾಶವಾಗಿಬಿಡುತ್ತೇವೆ. ಅಂದರೆ ಕಣ್ಣಿಗೆ ರೂಪ ಇಷ್ಟ. ಈರೂಪದ ಬೆನ್ನುಹತ್ತಿ ಹೋದರೆ ಮನುಷ್ಯ ಲಂಪಟನಾಗಿ ಸರ್ವನಾಶವಾಗಿಬಿಡುತ್ತಾನೆ. ಆದುದರಿಂದ ಎಲ್ಲ ಇಂದ್ರಿಯಗಳು ನಮ್ಮ ಅಧೀನ ಇರಬೇಕು.ಸಪ್ತವ್ಯಸನಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ? ಏಳು ವ್ಯಸನಗಳಲ್ಲಿ ಒಂದು ವ್ಯಸನ ಅಂಟಿಸಿಕೊಂಡರೂ ಸಾಕು.ಎಲ್ಲ ಸರ್ವನಾಶ. ಮನುಷ್ಯನು ಏಳು ವಿಧದ ವ್ಯಸನಗಳಿಗೆ ಅಂಟಿಕೊಳ್ಳುತ್ತಾನೆ. ಇಂತಹ ವ್ಯಸನಗಳಲ್ಲಿ ಸೆರೆಯೂ ಒಂದು ಮನುಷ್ಯ ಈಸೆರೆಯ ಪಾಲಾದರೆ ಅವನ ನಾಶ ಅವನೆ ಮಾಡಿ ಕೊಂಡಂತೆ. ಮನುಷ್ಯನನ್ನು ಇತರರು ಯಾರೂ ನಾಶಮಾಡುವುದಿಲ್ಲ. ನಮ್ಮನ್ನು ನಾವೆ ಈ ಇಂದ್ರಿಯ, ವ್ಯಸನಗಳೆ ನಾಶಮಾಡುತ್ತವೆ.ರತ್ನದ ಸಂಕೋಲೆಯಾದರೇನು? ಬಂಧನವಲ್ಲವೆ? ಕೈಕೋಳ ಬೆಳ್ಳಿಯಾದದರೇನು? ಬಂಗಾರದ್ದಾದರೇನು? ಕೋಳ ಕೋಳವೆ? ಅದುನಮ್ಮನ್ನು ಬಂಧಿಸುತ್ತದೆ. ಹಾಗೆ ಇಂದ್ರಿಯಗಳು ನಮ್ಮವಲ್ಲವೆ ಎಂದರೆ ನಮ್ಮ ಇಂದ್ರಿಯಗಳೆ ಶತ್ರುವಾಗಿ ನಮ್ಮನ್ನು ನಾಶಮಾಡಿಬಿಡುತ್ತವೆ.

1)ಬಿಟ್ಟೆನೆಂದರೆ ಬಿಡದೀ ಮಾಯೆ.
ಬಿಡದಿದ್ದರೆ ಬೆಂಬತ್ತಿತ್ತು ಮಾಯೆ
ಯೋಗಿಗೆ ಯೋಗಿನಿಯಾಯಿತ್ತು ಮಾಯೆ.
ಸವಣಂಗೆ ಸವಣಿಯಾಯಿತ್ತು ಮಾಯೆ.
ಯತಿಗೆ ಪರಾಕಿಯಾಯಿತ್ತು ಮಾಯೆ ಚೆನ್ನಮಲ್ಲಿಕಾರ್ಜುನ.
ನಿನ್ನ ಮಾಯೆಗೆ ನಾನಂಜುವಳಲ್ಲ.

ಪದಗಳ ಅರ್ಥ

ಬೆಂಬತ್ತು-ಬೆನ್ನ ಹಿಂದೆ ಬರುವುದು, ಯೋಗಿನಿ-ಸನ್ಯಾಸಿನಿ,
ಸವಣ-ಶ್ರವಣ,ಜೈನಗುರು,
ಸವಣಿ-ಜೈನಸನ್ಯಾಸಿನಿ,

ಆಣೆ-ಪ್ರತಿಜ್ಞೆ, ಭಾಷೆ,

## ವಚನದ ಅರ್ಥ

ನಾವುಬಿಟ್ಟರೂ ನಮ್ಮನ್ನು ಮಾಯೆ ಹಿಡಿಯುತ್ತದೆ. ಕುರ್ಚಿಯ ಆಶೆ ಕೆಲವರಿಗೆ ಆದರೆ ಚುನಾವಣೆಯಲ್ಲಿ ಸೋಲು. ಆದರೆ ಕುರ್ಚಿಯ ಮಹಿಮೆ ಎಂಥದು ಎಂದರೆ ದೂರದಿಂದಲೇ ಬಾಬಾ ಎಂದು ಕರೆಯುತ್ತದೆ. ಇವನುಅದರ ಹತ್ತಿರ ಕೂಡ ಹೋಗಲು ಸಾಧ್ಯವಿಲ್ಲ. ಅದರೂ ಕುರ್ಚಿಯ ಮೋಹ ಹೋಗುವುದಿಲ್ಲ.ಮತ್ತೆ ಕೆಲವು ಸಲ ಈ ಮಾಯೆ ತಾನೇ ಬೆನ್ನತ್ತಿ ಬರುತ್ತದೆ. ಅಧಿಕಾರ ಕೀರ್ತಿ, ಹಣ,ಪ್ರತಿಭೆ ಇದ್ದಾಗ ಈಮಾಯೆ ಇನ್ನೂ ಹತ್ತಿರ ಸುಳಿದಾಡುತ್ತದೆ. ಬೇಕು ಬೇಕು ಎನ್ನುವ ದಾಹ ಹೆಚ್ಚುತ್ತಲೇ ಹೋಗುತ್ತದೆ. ಅದು ಬತ್ತದ ದಾಹ. ಮಕ್ಕಳನ್ನು ಅಂಗಡಿ ಬೀದಿಗೆ ಕರೆದುಕೊಂಡು ಹೋದರೆ ಕಂಡದ್ದನ್ನೆಲ್ಲಾ ಬೇಕುಎನ್ನುತ್ತದೆ. ಅದರ ಆಶೆಗೆ ಕೊನೆಯೇ ಇಲ್ಲ ಹಾಗೆ ಮಾಯೆ ಕಾಡುತ್ತದೆ. ಇನ್ನು ಈ ಜಗತ್ತೇ ಮಾಯೆ ಎಂದು ಸರ್ವಸಂಗ
ಮತ್ಯಾಗ ಮಾಡಿ ಹೋದವರಿಗೆ ಯೋಗಿನಿಯಾಗಿ ಜೊತೆಯಾಗುತ್ತದೆ. ವಿರಾಗಿನಿ ಯಾಗಿ ಜೊತೆ ಬರುತ್ತದೆ ಗಂಡಿಗೆ ಹೆಣ್ಣು ಹೆಣ್ಣಿಗೆ ಗಂಡು ಮಾಯೆಯಾಗಿ ಕಾಡುತ್ತದೆ. ಆದರೆ ಚೆನ್ನಮಲ್ಲಿಕಾರ್ಜುನನೆ ಕೇಳು ಪ್ರತಿಜ್ಞೆಮಾಡಿ ಹೇಳುತ್ತೇನೆ. ಇಂತಹ ಮಾಯೆಗೆ ನಾನಂಜುವುದಿಲ್ಲ. ಅಕ್ಕಮಹಾದೇವಿಯವರು ಸಾವ ಕೆಡುವ ಗಂಡ ನನಗೆ ಬೇಡ ಎಂದು ತಪಸ್ಸಿಗೆ ಹೋದರು. ಆದರೆ ರಾಜ್ಯಭ್ರಷ್ಟನಾದ ರಾಜ ಕೌಶಿಕ ಮಹಾದೇವಿಯವರನ್ನು  ಪಡೆಯಲು ತಾನೂ ವಿರಾಗಿ ವೇಷಹಾಕಿ ಬೆನ್ನ ಹಿಂದೆ  ಶ್ರೀ ಶೈಲಕ್ಕೆ ಹೋದ.ನಂತರ ಪರಿವರ್ತನೆಯಾಗಿ ಉದ್ಧಾರವಾದ.  ಸಾಧಕ-ರೊಂದಿಗೆ ಅಕ್ಕ ಮಹಾದೇವಿಯವರು, ಶ್ರೀ ಶೈಲ ಗುಹೆ ಕಾಡಾರಣ್ಯದಲ್ಲಿ ತಪಸ್ಸಿನಲ್ಲಿದ್ದಾರೆ. ರಾಜ್ಯ ಭಷ್ಟನಾದ ಕೌಶಿಕ ರಾಜ ಅಧಿಕಾರ ಹೋದ ತನ್ನ ಇತರ ಮಂತ್ರಿಗಳೊಂದಿಗೆ ಕಾವಿ ವಲ್ಕಲಗಳನ್ನುಟ್ಟು ಭಕ್ತನಾದೆನುಮಹಾದೇವಿ ನಾನೂ ಶರಣನಾಗಿದ್ದೇನೆ. ಈಗಲಾದರೂ ನನ್ನನ್ನು ಲಗ್ನ ಮಾಡಿಕೊ ಎಂದು ಬೇಡತೊಡಗಿದ್ದಾನೆ. ಪೀಡೆಹೋಯಿತು ಎಂದು ಈ ಕಾಡಾರಣ್ಯಕ್ಕೆ ಬಂದರೆ ಈ ಪೀಡೆ ಇಲ್ಲಿಗೂಬಂತು. ಈ ಮಾಯೆಯಿಂದ ನನಗೆ ಬಿಡುಗಡೆಯೆ ಇಲ್ಲವೆ? ಅಕ್ಕನವರು ಕಳವಳಿಸಿದ್ದಾರೆ.
ಅಲ್ಲೆಂದೊಡೆ ಉಂಟೆಂಬುದೀ ಮಾಯೆ. ನಾನು ಯಾವುದನ್ನು ಇಲ್ಲ ಎನ್ನುತ್ತೇನೆ ಅದನ್ನು ಇದು ಉಂಟು ಎಂದು ಹೇಳುತ್ತದೆ.
ಒಲ್ಲೆನೆಂದೊಡೆ ಬಿಡದೀಮಾಯೆ ಒಲ್ಲೆ ಹೋಗು ಎಂದರೆ ಹೋಗದು

ಈ ಮಾಯೆ. ನಾನು ಲೌಕಿಕ ನಡೆಸಲು ಬಂದ ವಳಲ್ಲ ಹೋಗು ಎಂದರೆ ಹೋಗುತ್ತಿಲ್ಲ. ಚೆನ್ನಮಲ್ಲಿಕಾರ್ಜುನನೆ ಇದು ನನಗೆ ಹಣೆ ಬರಹವೆ. ನಾನು ನಿನ್ನನ್ನು ನಂಬಿದ್ದೇನೆ. ನಿನ್ನನ್ನು ಮೊರೆಹೊಕ್ಕಿದ್ದೇನೆ. ಈ ಮಾಯೆ ಯಿಂದ ಬಿಡುಗಡೆಗೊಳಿಸು ಕಾಪಾಡು ಕಾಪಾಡು. ಶಿವಧೋ ಶಿವಧೋ. ನಿನಗೆ ಮೊರೆಹೊಕ್ಕಿದ್ದೇನೆ.

2) .ಬೆಂದ ಸಂಸಾರ ಬೆಂಬಿಡದೆ ಕಾಡಿಹುದಯ್ಯ.
ಏವೆನೇವನಯ್ಯಾ ಅಂದಂದಿನ ದಂದುಗಕ್ಕೆ?
ಏವೆನೇವೆನಯ್ಯಾ ಬೆಂದ ಒಡಲ ಹೊರೆವುದಕ್ಕೆ.
ನಾನಾರೆ .ಚೆನ್ನ ಮಲ್ಲಿಕಾರ್ಜುನಯ್ಯಾ. ಕೊಲ್ಲು ಕಾಯಿ ನಿಮ್ಮ ಧರ್ಮ.

### ಪದಗಳ ಅರ್ಥ

ಬೆಂದ-ಬೇಯಿಸಿದ, ಇಲ್ಲಿ ನೋವುಂಟುಮಾಡುವ ಸಂಸಾರ-ದೇಹ ವಿಡಿದುಬಂದ ಸಂಬಂಧಗಳು ದಂದುಗ-ದು:ಖ, ಕಷ್ಟ
ಏವೆನ್-ಏನುಮಾಡ ಲಿ?
ಹೊರೆ-ಕಾಪಾಡು, ರಕ್ಷಿಸು,
ಆರೆನ್- ಸಮರ್ಥಳಲ್ಲ.
ಧರ್ಮ-ಕರುಣೆ, ದಯೆ.

### ವಚನದ ಅರ್ಥ

ಬೆಂದ ಸಂಸಾರ ಬೆಂಬಿಡದೆ ಕಾಡಿಹುದಯ್ಯ. ಏನು ಮಾಡಲಿ ದೇವ ನೋವುಂಟು ಮಾಡುವ ಸಂಸಾರವು ನನ್ನ ಬೆನ್ನ ಹಿಂದೆ ಬಂದು ಕಾಡುತ್ತಿದೆ. ನನಗೆ ಅದರ ನೆರಳು ಕಂಡರೆ ಆಗದು. ಆದರೆ ಬೆನ್ನಟ್ಟಿ ಬರುತ್ತಿದೆ. ಅಂದಂದಿನ ದಂದುಗಕ್ಕೆ ಏವೆನಯ್ಯ? ಬೆಂದ ಒಡಲ ಹೊರೆವುದಕ್ಕೆ ನಾನಾರೆ ಅಂದಂದಿನ ಕಷ್ಟಗಳು ಏನು? ಹಸಿವು ತೃಷೆ, ರಕ್ಷಣೆ, ನಿದ್ರೆ, ರೋಗ, ಭಯ, ಈವಿಕಾರಗಳು ನನ್ನನ್ನು ಕಾಡುತಿವೆ.ಈ ಬೇಯುವ ಒಡಲನ್ನು ನಾನು ರಕ್ಷಿಸಲು ಶಕ್ತಳಲ್ಲ. ನಾನು ಏನು

ಮಾಡಲಿ ? ಈ ದೇಹವೊಂದು ನನ್ನ ಜೀವನಕ್ಕೆ ದೊಡ್ಡ ಅಡ್ಡಿಯಾಗಿದೆ. ಕೊಲ್ಲು ಕಾಯಿ ನಿಮ್ಮ ಧರ್ಮ. ಇಲ್ಲ ನನ್ನನ್ನು ಕೊಂದು ಬಿಡು . ಇಲ್ಲ ಸರಿಯಾಗಿ ರಕ್ಷಣೆ ಮಾಡು. ನಾನು ಸಾಕಷ್ಟು ನೊಂದಿದ್ದೇನೆ. ನಾನು ನಿನ್ನನ್ನು ಮೊರೆ ಹೊಕ್ಕಿದ್ದೇನೆ .ಕಾಯ ಕಾರಣವಾಗಿ ತೊಂದರೆ ಎಂದರಿತ ಅಕ್ಕಮಹಾದೇವಿಯವರು ಕೊಲ್ಲು ಕಾಯಿ ನಿಮ್ಮ ಧರ್ಮ ಎನ್ನುವ ಮೂಲಕ ದೇಹದ ಹಂಗು ದಾಟುವ ಪ್ರಯತ್ನ ನಡೆಸಿದ್ದಾರೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಏನು ಮಾಡಬೇಕು ತಿಳಿಯುತ್ತಿಲ್ಲ

3)ಬಾರದ ಭವಂಗಳಲ್ಲಿ ಬಂದೆನಯ್ಯ.
ಕಡೆಯಿಲ್ಲದ ತಾಪದಲ್ಲಿ ನೊಂದು
ನಿಮ್ಮ ಕರುಣೆಗೆ ಬಳಿ ಸಂದೆನಯ್ಯ
ಇದು ಕಾರಣ ಎನ್ನ ದೇವ ಚೆನ್ನ ಮಲ್ಲಿಕಾರ್ಜುನಂಗೆ,
ತನುವನುವಾಗಿ ಮನ ಮಾರುಹೋಗಿ ಮತ್ತಿಲ್ಲದ ತವಕದ ಸ್ನೇಹಕ್ಕೆ
ತೆರಹಿನ್ನೆಂತು ಹೇಳಾ.

## ಪದಗಳ ಅರ್ಥ

ಬಾರದ ಬವಂಗಳು -ಬರಬಾರದ ಜನ್ಮಗಳು. ತಾಪ-ದು:ಖ,
ಕರುಣೆ-ಅನುಗ್ರಹ ಭಯ
ಬಳಿಸಂದೆ- ಹತ್ತಿರವಾದೆ.
ಅನು-ಅನುಕೂಲ, ಒದಗಿ, ಮಾರುಹೋಗಿ ಕೊಟ್ಟುಕೊಂಡು,
ತವಕ-ಹಂಬಲ,
ತೆರಹು-ಅವಕಾಶ.

## ವಚನದ ಅರ್ಥ

ಬಾರದ ಭವಂಗಳಲ್ಲಿ ಬಂದೆನಯ್ಯ. ಕಡೆಯಿಲ್ಲದ ತಾಪದಲ್ಲಿ ನೊಂದೆನಯ್ಯ.ಬರಬಾರದ ಜನ್ಮಗಳಲ್ಲಿ ಬಂದೆ. ಮುಗಿಯಲಾರದಷ್ಟು ನೋವು ಅನುಭವಿಸಿದೆ. ನಿಮ್ಮ ಕರುಣೆಗೆ ಬಳಿಸಂದೆನಯ್ಯ. ನಿಮ್ಮ ದಯೆಗೆ ನಾನು ಹತ್ತಿರವಾದೆ. ಇದುಕಾರಣ ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗೆ ತನುವನುವಾಗಿ ಮನ ಮಾರುಹೋಗಿ . ಈ ಕಾರಣ ವಾಗಿ ನನ್ನ ಒಡೆಯನಾದ ಚೆನ್ನಮಲ್ಲಿಕಾರ್ಜುನನಿಗೆ ನನ್ನ ತನುವನ್ನು ಮನವನ್ನು

ಕೊಟ್ಟುಕೊಂಡೆನು. ತವಕದ ಸ್ನೇಹಕ್ಕೆ ತೆರಹಿನ್ನೆಂತು ಹೇಳಾ? ನಿನ್ನ ಒಡಗೂಡುವಿಕೆಗೆ ಅವಕಾಶ ಯಾವಾಗ ಎಂದು ನಾನು ದಾರಿ ನೋಡುತ್ತಿದ್ದೇನೆ.ಚೆನ್ನಮ 'ಲ್ಲಿಕಾರ್ಜುನನು ನನ್ನ ಗಂಡ . ಅವನಿಗೆ ನನ್ನ ತನು ಮನ ಇವೆಲ್ಲವನ್ನು ಮೀಸಲಿ
ರಿಸಿದನು.ಶಿವನೇಇನ್ನೆಂದೂ ಆನುಭವಿಸಿರದ ನಿನ್ನ ಹಂಬಲದ ಸ್ನೇಹಕ್ಕೆ ನಾನು ಕಾದಿದ್ದೇನೆ. ನೀನು ಎಂದಿಗೆ ಆವಕಾಶ ಮಾಡಿಕೊಡುವಿಯೊ ಎಂದು ನಾನು ಕಾತುರದಿಂದಿದ್ದೇನೆ. ಮುಕ್ತಿ ಎಲ್ಲ ಅನುಭಾವಿಗಳೂ ಬಯಸುವ ಕೊನೆಯ ಶ್ರೇಷ್ಠಗುರಿ, ಅದನ್ನು ಅಕ್ಕನವರು ತಮ್ಮ ಆರಂಭ ಜೀವನದಲ್ಲಿಯೇ ಬಯಸಿದ್ದಾರೆ.

4) ಬಲ್ಲಿದನಗೆಹ ತೆಗೆವನ್ನಬರ ಬಡವನ ಹರಣ ಹಾರಿಹೋದ ತೆರನಂತಾಯಿತ್ತು. ನೀ ಕಾಡಿ ನೋಡುವನ್ನಬರ ಎನಗಿದು ವಿಧಿಯೆ? ತೂರುವಾರುವನ್ನಬರ ಜೊಳ್ಳು ಹಾರಿಹೋದ ತೆರನಂತಾಯಿತ್ತು .ನನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯ ಚೆನ್ನಮಲ್ಲಿಕಾರ್ಜುನ.

### ಪದಗಳ ಅರ್ಥ

ಹಗೆಹ-ಕಣಜ, ಹಗೇವು,ಧಾನ್ಯ ತುಂಬಿಡುವ ರಕ್ಷಣೆಯಸ್ಥಳ. ಬಲ್ಲಿದ- -ಶ್ರೀಮಂತ
ಹರಣ-ಪ್ರಾಣ,
ವಿಧಿ-ಕರ್ಮ,
ತೂರು-ಧಾನ್ಯ ಹಸನುಗೊಳಿಸುವುದು.,

### ವಚನದ ಅರ್ಥ

ದೇವರು, ಭಕ್ತರಿಗೆ ಅಷ್ಟು ಸುಲಭದಲ್ಲಿ ಒಲಿಯುವುದಿಲ್ಲ. ಭಕ್ತರನ್ನು ಒರೆಹಚ್ಚಿ
ನೋಡುತ್ತಾ,' ಕಾಡಿನೋಡಿ ಪರೀಕ್ಷೆ ಮಾಡುತ್ತಾನೆ.ಇದನ್ನು ಎರಡು ದೃಷ್ಟಾಂತ ಗಳ ಮೂಲಕ ವಿವರಿಸಿದ್ದಾರೆ.1 ಶ್ರೀಮಂತನು ಬರಗಾಲದಲ್ಲಿ ಧಾನ್ಯ ಹಂಚದಿರುವ ಸಂದರ್ಭ, 2 ರೈತ ಧಾನ್ಯ ತೂರುವ ಸಂದರ್ಭ. ಇಂತಹ ರೂಪಕ ದೃಷ್ಟಾಂತಗ ಳನ್ನು ಗಮನಿಸಿದರೆ ಅಕ್ಕನವರ ಲೋಕಾನುಭವ, ಸಾಮಾಜಿಕ ಪ್ರಜ್ಞೆ

ಅತ್ಯಂತ ಸಮಕಾಲೀನವೂ ಲೋಕಹಿತದ ದೃಷ್ಟಿಯುಳ್ಳದ್ದೂ ಆಗಿರುವುದನ್ನು ಗಮನಿಸಬಹುದಾಗಿ ಧಾನ್ಯ ಇರುವ ಶ್ರೀಮಂತರು ಬರಗಾಲದ ಸಂದರ್ಭದಲ್ಲಿ ಧಾನ್ಯವನ್ನು ಕರುಣೆಯಿಂದ ಹಂಚುವುದಿಲ್ಲ. ತಾನು. ತನ್ನ ಕುಟುಂಬದ ಹಿತವನ್ನೆ ನೋಡಿಕೊಳ್ಳುತ್ತಾನೆ.ಇಂದು ಆಳುವ ಅಧಿಕಾರಿಗಳು, ಮಂತ್ರಿಗಳೂ ಕೂಡ ತಮ್ಮ ಹಿತವನ್ನೆ ನೋಡಿಕೊಳ್ಳುತ್ತಾರೆ. ಅಷ್ಟೊತ್ತಿಗೆ ಬಡವರ ಪ್ರಾಣ ಹೋಗಿಯೇ ಬಿಡುತ್ತದೆ. ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನೋಡಿದರೆ ಆಕಾಲದ ಶ್ರೀಮಂತರಿಗೂ, ಇಂದಿನ ಆಳುವವರಿಗೂ ಏನೂ ಅಂತರವಿಲ್ಲ ಎಂಬುದು ತಿಳಿಯುತ್ತದೆ. ಪರಮಾತ್ಮನೆ ಈಅಕ್ಕಮಹಾದೇವಿಯನ್ನು ನೀನು ಇನ್ನು ಎಷ್ಟು ಪರೀಕ್ಷೆ ಮಾಡುವೆನು? ಸುಗ್ಗಿ ಕಾಲದಲ್ಲಿ ರೈತ ಧಾನ್ಯ ತೂರುತ್ತಾನೆ ಜೊಳ್ಳು ಹಾರಿಹೋಗಿಬಿಡುತ್ತದೆ ಹಾಗೆ ನಾನು ಜೊಳ್ಳು ನನ್ನಲ್ಲಿ ಸತ್ವ ಇಲ್ಲ ಬಹಳ ಪರೀಕ್ಷೆ ಮಾಡಬೇಡ. ನನಗೆ ನಿನ್ನನ್ನು ಒಲಿಸುವ ಯೋಗ್ಯತೆ ಇಲ್ಲ. ನೀನು ಅದಾವ ರೀತಿಯ ಭಕ್ತಿಗೆ ಒಲಿಯುವೆ ಅದನ್ನಾದರೂ ತಿಳಿಸಿಕೊಡು. ಹಾಗೆ'ಭಕ್ತಿ ಮಾಡುತ್ತೇನೆ ಎಂದು ಪ್ರಾರ್ಥಿಸಿದ್ದಾರೆ. ಮಹಾದೇವಿಯಕ್ಕನವರ ಭಕ್ತಿ ಎಷ್ಟಿದೆಯೆಂದರೆ ಅವರಿಗೆ ಬೇರೇನು ಬೇಡ ಕೂಡಲೆ ಪರಮಾತ್ಮ ಬೇಕು .ಯಾವ ತ್ಯಾಗಕ್ಕೂ ಅವರು ಸಿದ್ದರಿದ್ದಾರೆ. ಆದರೂ ಪರಮಾತ್ಮನು ಅವರನ್ನು ಒರೆಗೆ ಇಡುತ್ತಲೆ ಇದ್ದಾನೆ.

5) ಭಾವ ಬೀಸರವಾಯಿತ್ತು. ಮನ ಮೃತ್ಯುವನಪ್ಪಿತ್ತು. ಆನೇವೆನಯ್ಯಾ. ಆಳಿತನದ ಮನ ತಲೆಕೆಳಗಾಯಿತ್ತು ಆನೇವೆನಯ್ಯ? ಬಿಚ್ಚಿಬೇರಾಗದ ಭಾವವಾಗೆ ಬೆರೆದು ಒಪ್ಪುಚ್ಚಿ ನಿನ್ನ ನಿತ್ಯ ಸುಖದೊಳಗೆಂದಿಪ್ಪೆನಯ್ಯ. ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಬೀಸರ-ನಷ್ಟ
ಏವೆನ್-ಏನು ಮಾಡಲಿ?
ಆಳಿತನ- ಆಳಬೇಕಾದ ಮನಸ್ಸು
,ನಿತ್ಯ ಸುಖ-ಅಮೃತತ್ವ ಬಿಡುಗಡೆ,
ಒಪ್ಪುಚ್ಚಿ- ಒಂದುಸಲ, ಈ ಜನ್ಮದಲ್ಲಿ

## ವಚನದ ಅರ್ಥ

ಇದು ವಿಕಳಾವಸ್ಥೆಯ ವಚನ. ಅಕ್ಕಮಹಾದೇವಿಯವರಿಗೆ
ಪರಮಾತ್ಮನ
ಪ್ರೇಮಸುಖದಲ್ಲಿ ಒಂದುಗೂಡುವ ಹಂಬಲ. ಆದರೆ ಅದು
ಸಾಧ್ಯವಾಗುತ್ತಿಲ್ಲ. ಪರಿಸ್ಥಿತಿಯೂ ವಿರುದ್ಧವಾಗಿದೆ.ದೇಹ, ಮನಗಳೂ
ಪ್ರತಿಕೂಲವಾಗಿವೆ ಕಾಲವೂ ವಿರುದ್ಧವಾಗಿದೆ. ಮನುಷ್ಯ ಮಾತ್ರಳಾದ
ನಾನು ನಿನ್ನನ್ನು ಪಡೆಯುವುದು ಹೇಗೆ? ನಿರು ಪಾಯ
ಸ್ಥಿತಿಯಲ್ಲಿದ್ದಾರೆ. ಹರನ ಹಂಬಲ ಮಾತ್ರ ಅಧಿಕ ವಾಗುತ್ತಲೇ ಇದೆ.
ಭಾವ ಬೀಸರವಾಯಿತ್ತು. ಮನ ಮೃತ್ಯುವನಪ್ಪಿತ್ತು. ಆನೇವೆನಯ್ಯಾ
ನನ್ನ ಭಾವ ಕೋಶವ ನಷ್ಟಗೊಳ್ಳುತ್ತಿದೆ. ಮನಸ್ಸು
ಅವಸಾನದತ್ತಸಾಗಿದೆ .ನನಗೆ ಬದುಕೆ ಇಲ್ಲವಾಗತೊಡಗಿದೆ.ಬಹುಶಃ
ನಾನು ಸಾವಿನಲ್ಲಿ ಶೂನ್ಯವಾಗಿ ಬಿಡುವೆನೇನೋ.ಆನೇವೆನಯ್ಯ?
ಆಳಿ ತನದ ಮನ ತಲೆಕೆಳಗಾಯಿತ್ತು. ನಾನು ಏನು ಮಾಡಲಯ್ಯ?
ಯಾವಮನಸ್ಸು ದೇಹವನ್ನು ಆಳಬೇಕಾಗಿತ್ತೋ ಆ ಮನಸ್ಸೆ
ಆಳಿಸಿಕೊಳ್ಳತೊಡಗಿದೆ.ಬಿಚ್ಚಿಬೇರಾಗದ ಭಾವವಾಗಿ ಬೆರದೊಪ್ಪಚ್ಚಿ
ನಿನ್ನ ನಿತ್ಯ ಸುಖದೊಳೆಂದಿಪ್ಪೆನಯ್ಯ? ಚೆನ್ನಲ್ಲಿಕಾರ್ಜುನನೆ
ನಿನ್ನನ್ನು ಭಾವದಲ್ಲಿ ತುಂಬಿಕೊಂಡು ಆ ಭಾವದಲ್ಲಿಯೆ ಲೀನವಾಗಿ
ನಿನ್ನಲ್ಲಿ ನಾನುಬೆರೆದು ಒಮ್ಮೆಯಾದರೂ ಆ ನಿನ್ನ ಸಂಗಾತ ನಿತ್ಯ
ಸುಖದಲ್ಲಿ ನಾನು ಎಂದಿರುವೆನು?ನಿನ್ನ ಅವಿರಳ ಸುಖ ನನಗೆಬರಲಿ.

6)ಬೋಳೆಯನೆಂದು ನಂಬಬೇಡ.ಢಾಳಕನವನು.
ಜಗದ ಬಿನ್ನಾಣಿ, ಬಾಣ, ಮಯೂರ, ಕಾಳಿದಾಸ
ಓಹಿಲ, ಉದ್ಭಟ, ಮಲುಹಣ ಇವರಿಗಿತ್ತ ಪರಿ ಬೇರೆ.
ಮುಕ್ತಿಯ ತೋರಿ ಭಕ್ತಿಯ ಮರೆಸಿ ಕೊಂಬ ಚೆನ್ನಮಲ್ಲಿಕಾರ್ಜುನ.

## ಪದಗಳ ಅರ್ಥ

ಬೋಳೆಯ-ಬೋಳಾಶಂಕರ, ಸಜ್ಜನ, ಮುಗ್ಧ,
ಢಾಳಕ- ಅವಿತು ಚೆಲ್ಲಾಟವಾಡುವವ.
ಬಿನ್ನಾಣಿ-ಚತುರ, ಬುದ್ಧಿವಂತ,ಚಮತ್ಕಾರ ಮಾಡುವವ.

## ವಚನದ ಅರ್ಥ

ಬೋಳೆಯನೆಂದು ನಂಬಬೇಡ ಢಾಳಕನವನು. ಶಿವನು ತನ್ನ ಭಕ್ತರ ಬಗೆಗೆ ಹೇಗೆ ಸರಸವಾಡುತ್ತಾನೆ ಎಂಬ ಕಥೆಗಳನ್ನು ಕೇಳಿ ಅಕ್ಕನವರು ಈವಚನ ಹಾಡಿಕೊಂಡಿದ್ದಾರೆ.ಈತ ಸಾಮಾನ್ಯನಲ್ಲ. ಮಹಾವೇಷಧಾರಿ. ಮುಗ್ದ ಭಕ್ತರನ್ನು ನಂಬಿಸಿ ಕೈಕೊಡುವವನು ಈತ. ಈತ ಬೋಳಾಶಂಕರನೆಂದು ನಂಬಿದರೆ ನಾವು ಮೋಸಹೋದಂತೆಯೇಸರಿ. ಇವನನ್ನು ನಂಬಬೇಡ. ಈತ ಮಹಾ ಮೋಸಗಾರ. ಮಹಾಮಾಯ ಕಾರ.ಭಕ್ತರಜೊತೆಆಟವಾಡಿ ಮರೆಯಾಗಿಬಿಡುತ್ತಾನೆ .ಚತುರಮತಿ ಇರುವ ಅತಿ ಬುದ್ಧಿವಂತನೀತ.ಜಗದ ಬಿನ್ನಾಣಿ ಬಾಣ, ಮಯೂರ, ಕಾಳಿದಾಸ, ಓಹಿಲ, ಉದ್ಭಟ, ಮಲುಹಣ ಇವರಿಗಿತ್ತ ಪರಿ ಬೇರೆ. ಭಕ್ತರು ಇವನನ್ನೊಲಿಸಿಕೊಳ್ಳಲು ಪಟ್ಟ ಪಾಡು ಒಂದೆ ಎರಡೆ? ಅವರಿಗೊಲಿದ ರೀತಿಯೆ ಬೇರೆ. ಮುಕ್ತಿಯ ತೋರಿ ಭಕ್ತಿಯ ಮರೆಸಿ ಕೊಂಬ. ಆ ಭಕ್ತರ ಕಥೆಗಳನ್ನು ಅವಲೋಕನ ಮಾಡಿದರೆ ಈತ ಮೋಕ್ಷದ 'ಆಶೆ ತೋರಿಸಿ ಏನೇನು ರಗಳೆ ರಂಪ ಮಾಡಿದ್ದಾನೆ ತಿಳಿಯುತ್ತದೆ. ಭಕ್ತರು ಭಕ್ತಿಯನ್ನೆ ಮಾಡದಂತೆ ಏನೆಲ್ಲ ಅಡ್ಡಿಗಳನ್ನು ಈತನೆ ತಂದೊಡ್ಡುತ್ತಾನೆ.ಮನುಷ್ಯ ಮಾತ್ರಳಾದ ನಾನು ಈ ಅಸಮಾನಗಾರನ ಸುಮ್ಮಾನದಾಟಗಳನ್ನು ತಾಳಬಲ್ಲೆನೆ? ನಿನ್ನ ಆಟಗಳು ನನಗೆ ಪ್ರಾಣಸಂಕಟವಾಗಿವೆ. ಅಕ್ಕನವರು ಬಣ್ಣಿಸಿದ್ದಾರೆ.

7)ಭವಭವದಲ್ಲಿ ತೊಳಲಿ ಬಳಲಿತ್ತೆನ್ನ ಮನ. ಆನೇವೆನಯ್ಯ ಹಸಿದುಂಡಡೆ ಉಂಡು ಹಸಿವಾಯಿತ್ತು. ಇಂದು ನೀನೊಲಿದೆಯಾಗಿ ಎನಗೆ ಅಮೃತದ ಆಪ್ಯಾಯನವಾಯಿತ್ತು. ಇದು ಕಾರಣ ನೀನಿಕ್ಕಿದ ಮಾಯೆಯನಿನ್ನು ಮೆಟ್ಟಿದೆನಾದಡೆ ಆಣೆ ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ .

ಪದಗಳ ಅರ್ಥ

.ಭವಭವ-ಜನ್ಮಜನ್ಮ
ತೊಳಲಿ-ಹುಡುಕಿ,
ಏವೆನ್-ಏನುಮಾಡಲಿ,
ಆಪ್ಯಾಯನ- ಆನಂದ,
ಆಣೆ-ಭಾಷೆ, ಪ್ರತಿಜ್ಞೆ,

ಅಮೃತ-ಸಾಕ್ಷಾತ್ಕಾರ.

## ವಚನದ ಅರ್ಥ

ಭವಭವದಲ್ಲಿ ತೊಳಲಿಬಳಲಿತ್ತೆನ್ನ ಮನ ಆನೇವೆನಯ್ಯ ? ಹಸಿದುಂಡಡೆ ಉಂಡು ಹಸಿವಾಯಿತ್ತು. ನನ್ನ ಮನಸ್ಸು ಜನ್ಮಜನ್ಮದಲ್ಲಿ ನಿನ್ನನ್ನು ಹುಡುಕಿ ಸಾಕಾಯಿತು ನಾನು ಏನು ಮಾಡಲಿ ?ಜನರು ಹಸಿದಾಗ ಊಟ ಮಾಡುತ್ತಾರೆ. ಊಟ ಮಾಡಿ ದಾಗಲೂ ಹಸಿವಾದ ಪರಿ ನನ್ನದು. ಪರಮಾತ್ಮನೆ ನನಗೆ ನಿನ್ನ ಹಸಿವಾಗಿದೆ. ಇಂದು ನೀನೊಲಿದೆಯಾಗಿ ಎನಗೆ ಅಮೃತದಾಪ್ಯಾಯನವಾಯಿತ್ತು. ಈ ದಿನ ನನಗೆ ನೀನು ಒಲಿದೆ . ಅಮೃತದಾನಂದ ಇಂದು ನನಗೆ ದೊರಕಿತು. ಇದು ಕಾರಣ ನೀನಿಕ್ಕಿದ ಮಾಯೆಯನಿನ್ನು ಮೆಟ್ಟಿದೆನಾದಡೆ ಆಣೆ ನಿಮ್ಮಾಣೆ ಚೆನ್ನಮಲ್ಲಿಕಾರ್ಜುನಾ. ಈ ಕಾರಣವಾಗಿ ನಾನು ಈ ಮಾಯೆಯನ್ನು ಇನ್ನು ಮೆಟ್ಟುವುದಿಲ್ಲ. ಅಕ್ಕಮಹಾದೇವಿಯವರ ಜೀವನದಲ್ಲಿ ಇಂದು ಅನಂದದ ದಿನ. ಇದುವರೆಗೆ ಅವರ ಬದುಕು ಅಘಾತ, ಸಂಘರ್ಷ,ಕಳವಳ, ಒತ್ತಡದಲ್ಲಿತ್ತು ಇಂದು ಅವರು ಸಾಧನೆಯಿಂದ ಸಿದ್ದಿಗೆ ಏರಿದ ಪರ್ವದ ದಿನ. ಸಾಕ್ಷಾತ್ಕಾರದ ದಿನ.ಆ ಆನಂದ, ದಿವ್ಯಾನುಭಾವ ಈವಚನದಲ್ಲಿದೆ. ಜನ್ಮ ಜನ್ಮದಲ್ಲಿ ನನ್ನ ಮನಸ್ಸು ನಿನಗಾಗಿ ಹುಡುಕಿ ಹಂಬಲಿಸಿತ್ತು. ನಾನು ಏನು ಮಾಡಲಿ? ಹಸಿದವನು ಊಟಮಾಡುತ್ತಾನೆ. ಆದರೆ ನನಗೆ ಊಟವಾದ ಮೇಲೆ ಹಸಿವಾಗಿದೆ. ಈಹಸಿವು ನನಗೆ ಹೊಸ ಅನುಭವ. ಇದು ದೇಹದ ಹಸಿವಲ್ಲ. ಆತ್ಮನ ಹಸಿವು. ಲೌಕಿಕದ ಹಸಿವನ್ನು ಸುಲಭವಾಗಿ ತೃಪ್ತಿಪಡಿಸಿಕೊಳ್ಳಬಹುದು. ಶುಚಿರುಚಿ ಆಹಾರ ನೀಡಿದರೆ ಮುಗಿಯಿತು. ಹಸಿವುಹೋಯಿತು. ಆದರೆ ಆತ್ಮನ ಹಸಿವು ನಿನ್ನ ದರ್ಶನದಿಂದ ಮಾತ್ರ ತೃಪ್ತಿಯಾಗುತ್ತದೆ. ಇದು ಲೋಕದ ವಸ್ತು ಗಳಿಂದ ತೃಪ್ತಿಯಾಗುವುದಿಲ್ಲ. ಯಾವ ಹಸಿವಿನಿಂದ ಜಗತ್ತು ಸೃಷ್ಟಿಯಾಯಿತೊ ಆ ಜಗತ್ತಿನ ಮೂಲವನ್ನು ದರ್ಶನ ಮಾಡಿಕೊಳ್ಳುವ ಹಸಿವು ನನ್ನಲ್ಲಿ ಅದಮ್ಯವಾಗಿದೆ.ಆ ಅಮೃತತತ್ವದ ಹಸಿವಿನಿಂದ ಅನುಭಾವ ಜೀವನಕ್ಕೆ ಕಾಲಿರಿಸಿದರು. ಅನಂತಕಾಲ ಹಂಬಲಿಸಿದರು. ತಪಸ್ಸು ಮಾಡಿದರು. ಇಂದು ಶಿವನು ಅನುಗ್ರಹಿಸಿದ ಕಾರಣ ಅಮೃತತತ್ವದ ಆಪ್ಯಾಯನವಾಯಿತ್ತು. ಪರಮಾತ್ಮನೆ ಅಣೆ ಮಾಡಿ ಹೇಳುತ್ತೇನೆ. ನೀನು ಒಡ್ಡಿದ ಮಾಯೆಯನ್ನು ತುಳಿಯವುದಿಲ್ಲ. ಇದುನಿನಗೆ ಕೊಡುತ್ತಿರುವ ಪ್ರತಿಜ್ಞೆ .

8)ಭಾವಿಸಿ ನೋಡಿದರೆ ಅಂಗವಾಯಿತ್ತು. ಅಂಗಸಂಗವಾಗಿ ಸಂಯೋಗವ ಮರೆದು ಲಿಂಗಸ್ವೈರಗಾದೆ. ಲಿಂಗೈಕ್ಯ ನಿಮ್ಮನಗಲದೆ ಅಂಗರುಚಿಗಳ ಮರೆದು,
ಲಿಂಗರುಚಿಗಳಲ್ಲಿ ಸ್ವೈರಗಾದೆ.
ಲಿಂಗಸ್ವೈರಗಾದ ಬಳಿಕ ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ.

## ವಚನದ ಅರ್ಥ

ಭಾವಿಸಿ-ಪರೀಕ್ಷಿಸಿ
ಅಂಗಸಂಗ-ಲಿಂಗದೀಕ್ಷೆ,
ಸಂಯೋಗ-ಭೋಗ,
ಲಿಂಗಸ್ವೈರಗು-ಲಿಂಗಾನಂದದ ಬೆರಗು. ಅಂಗರುಚಿಗಳು-ಲೌಕಿಕರು.
ಸ್ವೈರಗು-ಆನಂದಾ ತಿಶಯ.
ಭಾಷೆ-ಪ್ರತಿಜ್ಞೆ.
ಕೊಂದು- ಅವನನ್ನು ನನ್ನಲ್ಲಿ ಆಡಗಿಸಿ ಕೊಂಡು.

## ವಚನದ ಅರ್ಥ

ಭಾವಿಸಿ ನೋಡಿದಡೆ ಅಂಗವಾಯಿತ್ತು. ಅಂಗ ಸಂಗವಾಗಿ ಸಂಯೋಗವ ಮರೆದು ಲಿಂಗ ಸ್ವೈರಗಾದೆ. ತಿಳಿದು ನೋಡಿದರೆ ಇದು ಆಕಾರ ಪಡೆದಿತ್ತು.ಪರಮಾತ್ಮನನ್ನು ರೂಪದಲ್ಲಿ ಕಲ್ಪಿಸಿಕೊಂಡವರು ನಾವು. ಅಂಗಸಂಗವಾಗಿ ಸಂಯೋಗವ ಮರೆದು ಈ ಅಂಗವು ಲಿಂಗದೀಕ್ಷಾಸಂಗವನ್ನು ಪಡೆಯಿತು. ಕಾರಣ ಲೌಕಿಕ ಸಂಗ ಸಂಯೋಗದಿಂದ ದೂರವಾದೆ. ಲಿಂಗಸಾಕ್ಷಾತ್ಕಾರಕ್ಕೆ ಮನಸ್ಸುಕೊಟ್ಟೆ. ಈ ಲಿಂಗಪೂಜಾನಂದದಲ್ಲಿ ತನ್ಮಯಳಾದೆ. ಲಿಂಗೈಕ್ಯ ನಿಮ್ಮನಗಲದೆ ಅಂಗರುಚಿಗಳ ಮರೆದು ಲಿಂಗರುಚಿಗಳಲ್ಲಿ ಸ್ವೈರಗಾದೆ. ಪರಮಾತ್ಮನೆ ನಿಮ್ಮನ್ನು ದೃಢಹಿಡಿದು ದೇಹ ಗುಣಗಳಲ್ಲಿ ರುಚಿ ಕಾಣದೆ ಲಿಂಗಾನಂದದಲ್ಲಿ ಆನಂದಾತಿಶಯವನ್ನು ಕಂಡೆ. ಲಿಂಗ ಸ್ವೈರಗಾದ ಬಳಿಕ ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ. ಆನಂದ ಸಮಾಧಿಗೆ ಹೋದಮೇಲೆ ಪರಮಾತ್ಮನನ್ನು ನನ್ನಲ್ಲಿ ಅಡಗಿಸಿಕೊಳ್ಳುವ

ಉತ್ಕಂಟತೆ. ನಾನು ಅವನಲ್ಲಿ ಅವನು ನನ್ನಲ್ಲಿ ಇಲ್ಲವಾಗುವ ಇಚ್ಛಾ. ಈ ವಚನವು ಹೊರನೋಟಕ್ಕೆ ವಿಪರೀತವಾಗಿ ಕಾಣುತ್ತದೆ. ಆದರೆ ತಾತ್ವಿಕವಾಗಿ ನೋಡಿದಾಗ ಅದು ಸಹಜ ಅರ್ಥಗಳನ್ನು ಹೊರಡಿಸುತ್ತದೆ. ಭಾವಿಸಿನೋಡಿದಡೆ ಅಂಗವಾಯಿತ್ತು. ನಿಜದಲ್ಲಿ ನೋಡಿದರೆ ನಿರಾಕಾರನಾದ ಪರಮಾತ್ಮನನ್ನು ನಮ್ಮ ಅನುಕೂಲಕ್ಕೆ ಆಕಾರಗೊಳಿಸಿಕೊಂಡವರು ನಾವು. ನಿರಾಕಾರ ದೇವರಿಗೆ ನಮ್ಮಂತೆ ದೇಹವನ್ನು ಆರೋಪಿಸಿದೆವು.ಅಂಗಸಂಗ ವಾಗಿ ಸಂಯೋಗವ ಮರೆದು ಲಿಂಗಸ್ಯೆವೆರಗಾದೆ.ಈ ಆಂಗದ ಸೋಂಕಿನಿಂದ ಆತ್ಮನು ತನ್ನನ್ನು ಮರೆತು ಲಿಂಗದೂರನಾದನು. ಏನೊ ನನ್ನ ಜನ್ಮದ ಪುಣ್ಯವಿರಬೇಕು. ನಾನು ಗುರುವಿನ ಕರುಣದಿಂದ ಮತ್ತೆ ನಿಮ್ಮನ್ನು ಪಡೆದೆ. ಲಿಂಗೈಕ್ಯ ನಿಮ್ಮನಗಲದೆ ಅಂಗರುಚಿಗಳ ಮರೆದು ಲಿಂಗಸ್ಯೆವೆರಗಾದೆ. ನಿಮ್ಮಲ್ಲಿ ಒಂದಾಗುವ ಭಾಗ್ಯದಿಂದ ದೇಹ ಗುಣಗಳನ್ನೆಲ್ಲ ದೂರಮಾಡಿದೆ. ನಿನ್ನ ಪಡೆದುಕೊಳ್ಳುವಲ್ಲಿ ನಿರತಳಾದೆ. ಅಂಗ ಭೋಗವು ನಿರಸನವಾಗಿ ಲಿಂಗಭೋಗದಲ್ಲಿ ಒಂದಾಗಲು ಇಂದ್ರಿಯಗಳನ್ನು ಅರಿವಿನ ಮುಖದಲ್ಲಿ ನಡೆಸಿದೆ. ನಾನು ಇಲ್ಲವಾಗುವುದು ನಿನ್ನನ್ನು ನನ್ನಲ್ಲಿ ಲಯಿಸಿ ಕೊಂಡು ಎಂದು ನಿರ್ಧರಿಸಿದ್ದೇನೆ. ಸಾಕಾರಭಕ್ತಿಯ ಮಿತಿಗಳನ್ನು ದಾಟಿದ ಅಕ್ಕ ನವರು ಈಗ ದೇವರು ಏನು ಎನ್ನುವುದನ್ನು ಕಂಡುಕೊಂಡಿದ್ದಾರೆ. ಈಗ ಚೆನ್ನಮ ಲ್ಲಿಕಾರ್ಜುನನು ತಂದೆಯೂ ಅಲ್ಲ. ಗಂಡನೂ ಅಲ್ಲ. ಅದು ಅತೀತವಾದ ಒಳ್ಳೆ ಯದನ್ನು ನಿರ್ಮಾಣ ಮಾಡುವ, ಒಳಿತಿಗೆ ಲೋಕ ಮನ್ನಣೆ ಸಿಗುವುದನ್ನು ತೋರಿಸುವ ಶಕ್ತಿಯೆಂದು ಕಂಡುಕೊಂಡಿದ್ದಾರೆ. ಈಗ ಅಕ್ಕನವರು ನಿರ್ಲಿಪ್ತರು.

9)ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ ಐವರು ಮಕ್ಕಳು ಜನಿಸಿದರು.
ಒಬ್ಬ ಭಾವದ ರೂಪ. ಒಬ್ಬ ಪ್ರಾಣದ ರೂಪ
ಒಬ್ಬ ಐಮುಖವಾಗಿ ಕಾಯರೂಪಾದ;
ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರಣರಾದರು.
ಐಮುಖದರಸಿನ ಮನೆ ಸುಖವಿಲ್ಲೆಂದು ಕೈಲಾಸವ ಹೊಗೆನು.
ಮರ್ತ್ಯಕ್ಕೆ ಅಡಿಯಿಡೆನು, ಚೆನ್ನಮಲ್ಲಿಕಾರ್ಜುನ ದೇವ ನೀನೆ ಸಾಕ್ಷಿ.

## ಪದಗಳ ಅರ್ಥ

ಬಯಲು-ಪರಬ್ರಹ್ಮ ಅನಾದಿ ಜಗತ್ತು
ಪರ-ಪರಬ್ರಹ್ಮ, ಆದಿ, ಐವರು ಮಕ್ಕಳು ಐದು ಮಹಾಭೂತಗಳು. ಭೂಮಿ, ನೀರು, ಅಗ್ನಿ, ಗಾಳಿ, ಆಕಾಶ. ಭಾವದರೂಪ-ಮನ ಚಿತ್ತ, ಬುದ್ಧಿ, ಅಹಂಕಾರಗಳು. ಪ್ರಾಣದರೂಪ- ಜೀವಾತ್ಮ, ಕಾಯದರೂಪ-ಶರೀ ರಾದಿ ಐದಿಂದ್ರಿಯಗಳು. ಉತ್ಪತ್ತಿ-ಸೃಷ್ಟಿ, ಸ್ಥಿತಿ- ಇರುವುದು, ಐಮುಖದರಸಿನಮನೆ-ಪಂಚಭೂತ ಕಾಯ .

## ವಚನದ ಅರ್ಥ

ಈ ದೇಹವು 36 ತತ್ವಗಳಿಂದ ಆಗಿದೆ. ಪರಬ್ರಹ್ಮವು ಐದು ಮಹಾಭೂತಗಳ ಸೃಷ್ಟಿಗೆ ಕಾರಣವಾಗಿದೆ. ಈ ಪಂಚಮಹಾಭೂತ ಕಾರಣವಾಗಿ ನಾವು ಈಸೃಷ್ಟಿ ಯಲ್ಲಿ ಬಂದಿದ್ದೇವೆ. ಸ್ವರ್ಗ, ನರಕ ಇತ್ಯಾದಿ ಲೋಕಗಳು ಪುರಾಣದ ಕಥೆಗಳು.ಪುರಾಣದ ಮಿಥ್ಯಾ ಕಥೆಗಳಾಚೆಗೆ ಇಲ್ಲಿ ಚಿಂತನೆ ನಡೆದಿದೆ. ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ ಐವರು ಮಕ್ಕಳು ಜನಿಸಿದರು. ಬಯಲು ಎಂದರೆ ಅನಾದಿಯಾದ ಮಹಾ ಶೂನ್ಯ. ಪರ ಎಂದರೆ ಈ ಮಹಾಶೂನ್ಯವು ಸೃಷ್ಟಿಗೆ ಆರಂಭವಾಗುವ ಪೂರ್ವದ್ದು. ಅಂದರೆ ಒಂದು ಇತ್ತು ಅದು ಎರಡಾಯಿತು. ಇದರಿಂದ ಆಕಾಶ, ವಾಯು, ಅಗ್ನಿ, ನೀರು, ಭೂಮಿ ಎಂಬ ಐದು ಮಹಾಭೂತಗಳು ಉಗಮವಾದವು. ಒಬ್ಬಭಾವ ದರೂಪ, ಒಬ್ಬ ಪ್ರಾಣದ ರೂಪ, ಒಬ್ಬ ಐಮುಖವಾಗಿ ಕಾಯದ ರೂಪ. ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರ ಣರಾದರು. ಈ ಪಂಚ ಮಹಾಭೂತಗಳಿಂದ ಮಹಾಸೃಷ್ಟಿಯೆಲ್ಲವೂ ಪ್ರಕಟವಾಯಿತು. ಒಬ್ಬ ಭಾವದ ರೂಪ ಎಂದರೆ ಆಕಾಶವು ಆತ್ಮಸ್ವರೂಪ ಪಡೆದು ಅನಂತ ಆತ್ಮಗಳಿಗೆ ಅದು ಕಾರಣವಾಯಿತು. ಒಬ್ಬ ಪ್ರಾಣದ ರೂಪ ಗಾಳಿಯು ಪ್ರಾಣದ ಉಗಮ ಮತ್ತು ಉಸಿರಾಟದ ಆಧಾರವಾಯಿತು. ಜೀವ ಇರಲು ಪ್ರಾಣಧಾರವಾದ ವಾಯು ಸೃಷ್ಟಿಯಾದುದರಿಂದ ಜೀವದ ಸೃಷ್ಟಿಗೆ ವಾಯು ಪ್ರೇರಣೆ ಆಯಿತು. ಒಬ್ಬ ಕಾಯದರೂಪ. ಹೊರ ಜಗತ್ತಿನಲ್ಲಿ ಯಾವುದೆ ವಸ್ತು ಕಾಣಲು ಬೆಳಕು, ಶಾಖ ಅಗತ್ಯ. ಅದು ಅಗ್ನಿಸೂರನಿಂದ ಉಂಟಾಯಿತು. ಈಬೆಳಕಿನಿಂದ ವಸ್ತು ನೋಡಲು ಬರುತ್ತದೆ. ವಸ್ತು ರೂಪ ಪಡೆಯಲು ಬೆಳಕು, ಅಗ್ನಿ ಕಾರಣವಾಯಿತು. ಈಅಗ್ನಿ ಎಂದರೆ ಸೂರ್ಯನ ಉಷ್ಣತೆ ಕಾರಣವಾಗಿ ಇಲ್ಲಿ ವಸ್ತುಗಳು ಆಕಾರ ಪಡೆದವು. ದೇಹದ ರೂಪ ಪ್ರಕಟಣೆಗೆ ಈ ಸೂರ್ಯ ಕಾರಣವಾದ. ಅದರಿಂದ ಆತ್ಮಗಳು

ದೇಹರೂಪ ಪಡೆಯಲು ಈ ಊಷ್ಣತೆ ಬೆಳಕು ಕಾರಣವಾಯಿತು. ಇಬ್ಬರು ಉತ್ಪತ್ತಿ ಸ್ಥಿತಿಗೆ ಕಾರಣರಾದರು. ಇಬ್ಬರು ಎಂದರೆ ನೀರುಮತ್ತು ಭೂಮಿ. ಇವು ಸೃಷ್ಟಿಗೆ ಮತ್ತು ಸ್ಥಿತಿಗೆ ಕಾರಣವಾದವು. ನೀರು ಎಲ್ಲಿ ಬಿತ್ತು ಅಲ್ಲಿ ಬೀಜ ಮೊಳಕೆಯೊಡೆಯತೊಡಗಿತು. ಮೊಳಕೆಯೊಡೆದ ಬೀಜಕ್ಕೆ ಫಲವಂತಿಕೆ ಕೊಡುವುದು ಈ ಭೂಮಿ. ಈಭೂಮಿ ಮತ್ತು ನೀರು,ಬೀಜ ಮೊಳಕೆಯೊಡೆಯಲು, ಅದು ಒಂದೆಡೆ ನಿಂತು ಬೆಳೆಯಲು ಪ್ರೇರಣೆಯಾದವು. ಯಾವುದು ಹುಟ್ಟತೊಡಗಿತು, ಅದು ತನ್ನ ಅಂತ್ಯವನ್ನು ಜೊತೆಯೆ ತೆಗೆದುಕೊಂಡು ಬಂತು. ಹುಟ್ಟುತ್ತಿದ್ದ ಹಾಗೆ ಅದರ ಅವಧಿಯೂ ನಿರ್ಣಯವಾಗಿ ಹೋಯಿತು.ಆತ್ಮನು ಜನನ ಮರಣದಲ್ಲಿ ಬರಲು ಒಂದು ಭವಚಕ್ರ ಸಿದ್ಧವಾಯಿತು. ಐವರರರಸಿನಮನೆ ಸುಖವಿಲ್ಲೆಂದು ಕೈಲಾಸವ ಹೊಗೆನು. ಐವರರರಸಿನ ಮನೆ ಎಂದರೆ ನಾವು ಪಡೆದು ಬಂದಿರುವ ದೇಹ. ಈದೇಹ ಅಶಾಶ್ವತ ಎಂದು ಕೈಲಾಸದ ವಿಚಾರ ಮಾತನಾಡುವುದಿಲ್ಲ. ನನಗೆ ಆ ಕೈಲಾಸ ಬೇಡ. ಅಲ್ಲಿಗೆ ನಾನು ಪ್ರವೇಶಿಸುವುದಿಲ್ಲ. ಮರ್ತ್ಯಕ್ಕೆ ಅಡಿಯಿಡೆನು. ನಾನು ಮತ್ತೆ ಹುಟ್ಟಿ ಬರುವುದಿಲ್ಲ ಸಾಕು ಈಜನ್ಮ. ಚೆನ್ನ ಮಲ್ಲಿಕಾರ್ಜುನ ದೇವ ನೀನೆ ಸಾಕ್ಷಿ. ಚೆನ್ನಮಲ್ಲಿಕಾರ್ಜುನನ ಪರಿಕಲ್ಪನೆ ಈವಚನದಲ್ಲಿ ಬದಲಾಗಿದೆ. ಚೆನಮಲ್ಲಿಕಾರ್ಜುನ ಎಂದರೆ ಇಲ್ಲಿ ಪರಬ್ರಹ್ಮ. ಪರವಸ್ತು. ನನಗೆ ಇನ್ನು ಹುಟ್ಟು ಸಾವಿನ ಸುಖವೂ ಬೇಡ. ನನಗೆ ಬಯಲಬ್ರಮೆಗಳೆಲ್ಲವೂ ಹೋದವು. ಅಕ್ಕಮಹಾದೇವಿಯವರು ಈಗ ನಿರ್ಲಿಪ್ತರೂ, ನಿರ್ಭಾವರೂ ಆದರು. ಇಲ್ಲಿ ಆಶೆಗಳೂ ಇಲ್ಲ. ನಿರಾಶೆಯೂ ಇಲ್ಲ. ಇದು ಒಂದು ಬ್ರಹ್ಮಭಾವದ ಸ್ಥಿತಿ. ಲೋಕವೆ ತಾನಾದ ಬಳಿಕ ಏಕಾಂತವನ್ನು ಮೀರಿದ ಧ್ಯಾನಸ್ಥಸ್ಥಿತಿ.

10) ಭವಿಸಂಗವಳಿದು ಭಕ್ತನಾದ ಬಳಿಕ
ಭಕ್ತಂಗೆ ಭವಿಸಂಗವತಿ ಘೋರ ನರಕ.
ಶರಣಸತಿ ಲಿಂಗಪತಿಯಾದ ಬಳಿಕ ಶರಣಂಗೆ ಸತಿಸಂಗವತಿಘೋರ ನರಕ.
ಚೆನ್ನಮಲ್ಲಿಕಾರ್ಜುನಾ.
ಪ್ರಾಣಗುಣವಳಿಯದವರ ಸಂಗವೆ ಭಂಗ.

ಪದಗಳ ಅರ್ಥ

ಭವಿ-ಲೌಕಿಕ,
ಭಕ್ತ-ಅಲೌಕಿಕ.
ಶರಣಸತಿಲಿಂಗಪತಿ-ಆತ್ಮನೆ ಸತಿ, ಪರಮಾತ್ಮನೆ ಪತಿ.
ದೇಹಸತಿ - ಅರಿವು ಪತಿ.
ಸತಿಸಂಗ- ದೇಹಹೇಳಿದಂತೆ ಕೇಳುವುದು.
ಪ್ರಾಣಗುಣ-ರಾಗಮತ್ತರಾಗಿರುವುದು, ವಿಷಯಾದಿ ಗುಣಗಳು, ಭಂಗ-ಹಾನಿ,ಕೆಡುಕು.

## ವಚನದ ಅರ್ಥ

ಭವಿಸಂಗವಳಿದು ಭಕ್ತನಾದ ಬಳಿಕ ಭಕ್ತಂಗೆ ಭವಿಸಂಗವತಿ ಘೋರನರಕ. ಇಂದ್ರಿಯಾದಿ ಗುಣಗಳಿಂದ ವಿಷಯಮುಖರಾಗಿ ಹೋಗುವುದನ್ನು ಬಿಟ್ಟು ಭಕ್ತಿ ಮಾರ್ಗದಲ್ಲಿ ಅರಿವಿನ ಪಥದಲ್ಲಿ ನಡೆಯುವುದು ಶ್ರೇಷ್ಠ. ವಿಷಯಾದಿಗಳಿಂದ ದುಃಖವಿದೆ ಎಂದು ತಿಳಿದಮೇಲೆ ಅವುಗಳಿಂದ ಪಾರಾಗಲು ಪ್ರಯತ್ನಿಸುವುದು ಇನ್ನೂ ಶ್ರೇಷ್ಠ ಇದು ಭವಿ ಭಕ್ತನಾದ ಪಥ. ಈತ ಮತ್ತೆ ಭವಿಸಂಗ ಮಾಡಿದರೆ ಅತಿಘೋರ. ನರಕದಲ್ಲಿ ಸಿಕ್ಕಿಬೀಳುತ್ತಾನೆ. ಶರಣಸತಿ ಲಿಂಗಪತಿಯಾದ ಬಳಿಕ ಶರಣಂಗೆ ಸತಿಸಂಗವತಿ ಘೋರ ನರಕ. ದೇಹವೆ ಸತಿಯಾಗಿ ಅರಿವು ಪತಿಯಾದ ಬಳಿಕ ಮತ್ತೆ ದೇಹವು ಅರಿವಿನಅನುವರ್ತಿಯಾಗಿ ನಡೆಯಬೇಕು. ಅದು ಬಿಟ್ಟು ಮತ್ತೆ ವಿಷಯಾದಿ ಗುಣಗಳಲ್ಲಿ ರತರಾಗುವುದು ಅತಿ ದುಃಖವನ್ನು ತಂದು ಕೊಡುತ್ತದೆ. ಚೆನ್ನಮಲ್ಲಿಕಾರ್ಜುನ ಪ್ರಾಣಗುಣವಳಿಯದವರ ಸಂಗವೇ ಭಂಗ. ಪರಮಾತ್ಮನೆ ಯಾರಲ್ಲಿ ಇನ್ನೂ ಈ ವಿಷಯಾದಿ ರಾಗಭಾವಾದಿ ಗುಣಗಳು ನಾಶವಾಗಿಲ್ಲ ಅಂತಹವರ ಸಹವಾಸ ಅತಿ ಕಷ್ಟ ಇವರ ಚಿಂತನೆ ಜೀವನ ಎಲ್ಲವೂ ದೇಹಪ್ರಧಾನವಾದುದರಿಂದ ನಮಗೆ ಅರಿವಿನ ಪಥದಲ್ಲಿ ಮುಂದುವರಿಯಲು ಅಡ್ಡಿಯಾಗುತ್ತಾರೆ. ಈ ವಚನ ನಮಗೆ ಒಳ್ಳೆಯ ತಿಳಿವಳಿಕೆ ಕೊಡುತ್ತದೆ.ಅನುಭಾವ ಮಾರ್ಗ ಅರಿವಿನ ಮಾರ್ಗ, ಜ್ಞಾನಿಗಳ ಒಡ ನಾಟವಿದ್ದರೆ ಜೀವನ ಉತ್ಥಾನಪಥದಲ್ಲಿ ಸಾಗುತ್ತದೆ. ವಿಷಯಾದಿ ಗುಣಗಳಿದ್ದವರ ಕೂಡ ವ್ಯವಹರಿಸಿದರೆ ನಮ್ಮನ್ನು ಭವದತ್ತ ಎಳೆದುಬಿಡುತ್ತಾರೆ ಆದುದರಿಂದ ಕೂಡದು.

11) ಬಸವನ ಭಕ್ತಿ ಕೊಟ್ಟಣದ ಮನೆ. ಸಿರಿಯಾಳನ ಭಕ್ತಿ ಕಸಬುಗೇರಿ. ಸಿಂಧು ಬಲ್ಲಾಳನ ಭಕ್ತಿ ಪರದಾರ ದ್ರೋಹ, ಉಳಿದಾದ ಅಟಮಟ ದಾಸೋಹವ ಮಾಡುವವರ ದೈನ್ಯವೆಂಬ ಭೂತ ಸೋಂಕಿತು. ಮಣ್ಣಿನ ಮನೆಯ ಕಟ್ಟಿ ಮಾಯಾ ಮೋಹಿನಿ ಎಂಬ ಮಹೇಂದ್ರಜಾಲದೊಳಗಾಗಿ ಮಾಡುವ ಮಾಟ ಭಕ್ತನಲ್ಲಿ ಉಂಡು ಉದ್ದಂಡ ವೃತ್ತಿಯಲ್ಲಿ ನಡೆವವರು ಶಿವನಲ್ಲ ಇವರು ದೇವಲೋಕಕ್ಕೆ ಮರ್ತಲೋಕಕ್ಕೆ ಹೊರಗು. ಇನ್ನು ನಿರ್ವಯಲಾದೆ ಕಾಣಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಕೊಟ್ಟಣ-ಧವಸಧಾನ್ಯ ಕುಟ್ಟುವ ಸಾಧನ. ಕಸಬುಗೇರಿ-ಕಟುಕರ ಓಣಿ,
ಪರದಾರ-ಅನೀತಿ,ಹಾದರ
ಅಟಮಟ-ಸಣ್ಣಪುಟ್ಟ,
ದೈನ್ಯ-ಯಾಚನೆ.
ಭೂತ-ದೆವ್ವ,
ಉದ್ದಂಡ ವೃತ್ತಿ-ಹದ್ದುಮೀರಿದ ವರ್ತನೆ. ನಿರ್ವಯಲು -ಬಯಲು.

## ವಚಪದ ಅರ್ಥ

ಬಸವನಭಕ್ತಿ ಕೊಟ್ಟಣದಮನೆ. ಸಿರಿಯಾಳನ ಭಕ್ತಿ ಕಸಬುಗೇರಿ. ಬಸವಣ್ಣನವರಭಕ್ತಿ ಏನಾಗಿದೆ ಎಂದರೆ ಧವಸ ಧಾನ್ಯ ಕುಟ್ಟುವ ಒಂದು ಗಿರಣಿಮನೆಯಾಗಿದೆ. ಅಲ್ಲಿ ಭಕ್ತಿ ಜ್ಞಾನಕ್ಕಿಂತ ಹೆಚ್ಚಾಗಿ ಉಣ್ಣುವ, ಅಟ್ಟುವ, ನೀರು ತರುವ, ಎಲೆ ತರುವ, ಪಾತ್ರೆ ತೊಳೆಯುವ ಸ್ವಚ್ಚಮಾಡುವ ಕಾಯವೆ ಹೆಚ್ಚಾಗಿದೆ. ಸಿರಿಯಾಳನ ಭಕ್ತಿಯಾದರೋ ಅದು ಕಟುಕರ ಮನೆಯಾಗಿದೆ. ಮಗನನ್ನೆ ಕಡಿದು ಉಣಬಡಿಸುವುದು ಎಂದರೆ ಏನು? ಮನುಷ್ಯತ್ವ ಇಲ್ಲದ ಭಕ್ತಿ. ಸಿಂಧು ಬಲ್ಲಾಳನ ಭಕ್ತಿ ಪರದಾರ ದ್ರೋಹ. ಸಿಂಧು ಬಲ್ಲಾಳನು ಮಹಾರಾಜನಂತೆ . ಅವನಭಕ್ತಿ ಸತಿಯರಿಗೆ ದ್ರೋಹ ಮಾಡುವ ಭಕ್ತಿ ಪತ್ನಿಯನ್ನು ಕೊಡುವುದು ಎಂದರೇನು?ಹಾದರವೂ ಭಕ್ತಿಯೆ. ? ಉಳಿದಾದ ಅಟಮಟ ಉದಾಸೀನ ದಾಸೋಹವ ಮಾಡುವವರ ದೈನ್ಯವೆಂಬ ಭೂತ ಸೋಂಕಿತು. ಇನ್ನು ದಾಸೋಹ ಮಾಡುವವರಲ್ಲಿ ಎರಡು ವಿಧ. ಕೆಲವರು ಉದಾಸೀನದಿಂದ ಮಾಡಬೇಕಲ್ಲ ಎಂದು ದಾಸೋಹ ಮಾಡುತ್ತಾರೆ. ಮತ್ತೆ ಕೆಲವರಿಗೆ ದೀನಭಾವಧ ದೆವ್ವ ಮೆಟ್ಟಿಕೊಂಡಿದೆ. ಇದೆಲ್ಲ ಭಕ್ತಿಯಿಂದ ಹೊರಗು .

ಭಕ್ತಿಯೆಂದರೆ ಒಂದು ಗಾಂಭೀರ ಬೇಕು. ಘನತೆ ಬೇಕು. ಇದು ಭಕ್ತಿಮಾಡುವವರಿಗೆ ತಿಳಿಸಿದ ವಿಚಾರ. (ಅನುಭವ ಮಂಟಪದಲ್ಲಿ ದಾಸೋಹ ಯಾವರೀತಿಯಲ್ಲಿ ಇತ್ತು ಅಲ್ಲಿನ ಇತರ ಶರಣರು ಯಾರೀತಿಯಲ್ಲಿ ಇದ್ದರು ಅನ್ನುವುದನ್ನು ಇಲ್ಲಿ ತಿಳಿಸಿದ್ದರೆ) ಈಗ ಇಂತಹ ಭಕ್ತಿ ಸ್ವೀಕರಿಸಲು ಬರುವ ಜಂಗಮ ದೇವರಿಗೆ ಕೂಡ ಒಂದು ಸರಿಯಾದ ವ್ಯಕ್ತಿತ್ವ ಬೇಕು. ದೇವರಾದರೇನು? ಅವನೂ ಒಂದು ಗೆರೆಯ ಒಳಗೆ ನಡತೆ ಇರಿಸಿಕೊಂಡಿರಬೇಕು. ಮಣ್ಣಿನ ಮನೆಯಕಟ್ಟಿ ಮಾಯಾಮೋಹಿನಿ ಎಂಬ ಮಹೇಂದ್ರ ಜಾಲದೊಳಗಾಗಿ ಮಾಡುವ ಮಾಟ. ಭಕ್ತನಲ್ಲಿ ಉಂಡು ಉದ್ದಂಡವೃತ್ತಿಯಲ್ಲಿ ನಡೆವವರು ಶಿವನಲ್ಲ. ಜಂಗಮ ಎನಿಸಿಕೊಂಡವರು ಇಂದ್ರಜಾಲ ಮಾಡುವವರು,ಮಹೇಂದ್ರಜಾಲ ಮಾಡುವವರು ಮಾಡುವಹಾಗೆ ವರ್ತನೆ ಮಾಡುವುದಲ್ಲ. ಭಕ್ತರ ಮನೆಗೆ ಬಂದರೆ ನಯವಿನಯ ಗಂಭೀರ ಬೇಕು. ಹೇಗೆಂದರೆ ಹಾಗೆ ಗುರುಗಳಾದವರು ವರ್ತನೆ ಮಾಡಬಾರದು. ಭಕ್ತರನ್ನು ಕಸದಂತೆ ನಡೆಸಿಕೊಳ್ಳುವುದಾಗಲಿ ,ಭಕ್ತರು ಮಾತೆ ಆಡದಂತೆ ಭಯಂಕರವಾಗಿ ವರ್ತಿಸುವುದಾಗಲಿ ಕೂಡದು.ಗುರು ವಾದರೇನು ಸ್ವೇಚ್ಛೆಯಾಗಿ ನಡೆದುಕೊಳ್ಳಕೂಡದು. ಹಾಗೇನಾದರೂ ವರ್ತಿಸಿದರೆ ಅವರು ಗುರುಗಳಲ್ಲ. ಜಂಗಮರಲ್ಲ. ಅಂತಹವರಿಗೆ ಭಕ್ತಿಮಾಡುವವರು ಭಕ್ತರಲ್ಲ. ಇವರು ಮರ್ತ್ಯಲೋಕಕ್ಕೆ ಸಲ್ಲುವುದಿಲ್ಲ. ಚೆನ್ನಮಲ್ಲಿಕಾರ್ಜುನನೆ ಇನ್ನು ನಾನು ಬಯಲಾಗುತ್ತೇನೆ. ಈಭಕ್ತರ,ಗುರುಗಳ ವಿಚಿತ್ರ ಪ್ರಪಂಚ ಸಾಕು:ಶರಣರ,ಮಹಾ ಮನೆಯ ಬಗೆಗೆ ಹಿರಿದಾದ ಕಲ್ಪನೆ ಇರಿಸಿಕೊಂಡಿದ್ದರು. ಅವೆಲ್ಲ ಕನಸಿನ ಗೋಪು ರದಂತೆ ಕಲ್ಪನೆಯಾಗಿ ಹೋಯಿತು.

12).ಬಂದಹನೆಂದು ಬಟ್ಟೆಯ ನೋಡಿ ಬಾರದಿದ್ದರೆ ಕರಗಿ ಕೊರಗಿದೆನವ್ವ, ತಡವಾದರೆ ಬಡವಾದೆ ತಾಯೆ .
ಚೆನ್ನಮಲ್ಲಿಕಾರ್ಜುನ ಒಂದಿರುಳು ಅಗಲಿದರೆ ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತೆ ಆದೆನವ್ವ.

## ವಚನದ ಅರ್ಥ

ಬಂದಹನೆಂದು ಬಟ್ಟೆಯ ನೋಡಿ ಬಾರದಿದ್ದರೆ ಕರಗಿ ಕೊರಗಿದೆನವ್ವ..ಬರುತ್ತಾನೆಂದು ದಾರಿ ನೋಡಿದೆ. ಆದರೆ ಬರದೆ

ಇದ್ದಾಗ ನಾನು ಚಿಂತೆ,ಕಳವಳಕ್ಕೀಡಾದೆ.ತಡವಾದರೆ ಬಡವಾದೆ ತಾಯೆ. ಬರುವುದು ನಿಧಾನವಾದಾಗ ನಾನು ಬಡವಾದೆನು. ಚೆನ್ನ ಮಲ್ಲಿಕಾರ್ಜುನ ಒಂದಿರುಳು ಅಗಲಿದರೆ ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತೆ ಆದೆನವ್ವ. ಚೆನ್ನಮಲ್ಲಿಕಾರ್ಜುನನು ಒಂದು ರಾತ್ರಿ ಅಗಲಿದರೂ ನಾನು ತಾಳಲಾರೆ. ಚಕ್ರವಾ ಕಪಕ್ಷಿಗಳು ಜೋಡಿಯಾಗಿರುವವು. ಹಾಗೆ ನಾನು ಪರಮಾತ್ಮನೊಂದಿಗೆ ಜೋಡಿ ಯಾಗಿರಬೇಕು.ಚಕ್ರವಾಕ ಪಕ್ಷಿಗಳು ಅಪ್ಪಿದ ಅಪ್ಪುಗೆ ತುಸು ಸಡಿಲಿದರೂ ಚಡಪಡಿಸುವವು. ಹಾಗೆ ಪರಮಾತ್ಮನ ಅಪ್ಪುಗೆಯಲ್ಲಿರಲು ಕಾತುರ, ಕಳವಳದಲ್ಲಿದ್ದೇನೆ. ಚಕ್ರವಾಕ ಪಕ್ಷಿಯ ಉಪಮೆ ಪ್ರೀತಿ, ಪ್ರೇಮದ ಪರಾಕಾಷ್ಠೆ ಕನ್ನಡ ಕಾವ್ಯದಲ್ಲಿ ಈ ಪ್ರೀತಿ ಪ್ರಣಯ,ಪ್ರೇಮದ' ಸಂಗತಿಗಳು ಇಷ್ಟೊಂದು ನವಿರಾಗಿ ಭಾವಗೀತಾಭಿವ್ಯಕ್ತಿಪಡೆ ದುದು ಕಡಿಮೆ. ಅಕ್ಕನವರಲ್ಲಿ ಅಪೂರ್ವವಾಗಿದೆ. ಕವಿ ಕೀಟ್ಸ್ ನಇಂಗ್ಲಿಷ್ ಸಾಹಿತ್ಯ ದಲ್ಲಿ ಪಂಪನ ಆದಿಪುರಾಣದಲ್ಲಿ, ಕಾಳಿದಾಸನ ಅಭಿಜ್ಞಾನ ಶಾಕುಂತಲದಲ್ಲಿ, ಸಂಸ್ಕೃತದ ಬಿಡಿಮುಕ್ತಕಗಳಲ್ಲಿ ಈ ಚಿತ್ರಣ ಕಾಣಬಹುದು. ಆದರೆ ಪ್ರೇಮದ ವಿವಿಧ ನವಿರು ಹೊಸತು ಅಭಿವ್ಯಕ್ತಿಗೆ ಅಕ್ಕಮಹದೇವಿಯವರ ವಚನಗಳಲ್ಲಿಗೆ ಬರಬೇಕು. ಪ್ರೇಮದ ವಿವಿಧ ಘಟ್ಟಗಳನ್ನು ವಿರಹದ ಉತ್ಕಂಠತೆಯನ್ನು ಅಕ್ಕನವರು ಮಾತ್ರ ಕೊಡಬಲ್ಲರು. ಮುಂದಿನ ಅವರ ವಚನಗಳು ವಿರಹದ ಹೊಸ ಜಗತ್ತನ್ನೆ ತೆರೆದು ತೋರಿಸುತ್ತವೆ. ಇದು ನಿಜವಾದ ವಿರಹ. ದೈವೀಕರಣಗೊಂಡ ಉನ್ನತ ಪ್ರೇಮ.ಕವಿ ಚಿತ್ರಣದಲ್ಲಿ ಆರೋಪಿತ ಭಾವ. ಅಕ್ಕನವರಲ್ಲಿ ಅವರದೆ ಆದ ತಾಜಾ ಅನುಭವ.

13).ಬಂಜೆ ಬೇನೆಯನರಿಯಳು, ಬಲದಾಯಿ ಮುದ್ದಬಲ್ಲಳೆ ?
ನೊಂದವರ ನೋವ ನೋಯದವರೆತ್ತ ಬಲ್ಲರು?
ಚೆನ್ನಮಲ್ಲಿಕಾರ್ಜುನಯ್ಯ ಇರಿದ ಅಲಗು ಒಡಲಲ್ಲಿ ಮುರಿದು
ಅಳಲುವ ಎನ್ನಳಲನು ನೀವೆತ್ತ ಬಲ್ಲಿರೆ ಎಲೆ ತಾಯಿಗಳಿರಾ.?

## ಪದಗಳ ಅರ್ಥ

ಬೇನೆ-ಹೆರಿಗೆ ನೋವು.
ಬಲದಾಯಿ-ಮಲತಾಯಿ
ಮುದ್ದು-ಪ್ರೀತಿ

ಅಲಗು-ಖಡ್ಗ
ಅಳಲು-ದುಃಖ,
ಹೊರಳು-ಹೊರಳಾಡು, ನೋವು ತಿನ್ನು .

## ವಚನದ ಅರ್ಥ

ಬಂಜೆ ಬೇನೆಯನರಿಯಳು ಬಲದಾಯಿ ಮುದ್ದಬಲ್ಲಳೆ? ಮಕ್ಕಳನ್ನು ಹಡೆಯದಿದಿರುವವಳು ಹೆರಿಗೆ ನೋವು ಏನು ಎಂದು ತಿಳಿಯಳು. ಮಲತಾಯಿಯಾದವಳಿಗೆ ಮಲಮಕ್ಕಳನ್ನು ಪ್ರೀತಿ ಮಾಡಿ ತಿಳಿಯದು. ನೊಂದವರ ನೋವ ನೋಯದವ ರೆತ್ತ ಬಲ್ಲರು? ಯಾರು ನೋವನ್ನೆ ಅನುಭವಿಸಿಲ್ಲವೊ ಅವರು ನೋವು ಏನು ಎಂದು ಕಲ್ಪಿಸಿಕೊಳ್ಳಲೂ ಆಗದು.. ಚೆನ್ನಮಲ್ಲಿಕಾರ್ಜುನಯ್ಯ ಇರಿದ ಅಲಗು ಒಡಲಲ್ಲಿ ಮುರಿದು ಅಳಲುವ ಎನ್ನಳಲನು ನೀವೆತ್ತಬಲ್ಲಿರೆ ತಾಯಿಗಳಿರಾ. ನನಗೆ ಚೆನ್ನಮಲ್ಲಿಕಾರ್ಜುನನು ಖಡ್ಗದಲ್ಲಿ ಎನ್ನ ಹೊಟ್ಟೆಗೆ ಇರಿದು ಬಿಟ್ಟಿದ್ದಾನೆ ಆ ಖಡ್ಗ ಎನ್ನ ಹೊಟ್ಟೆಯಲ್ಲಿ ಮುರಿದುಕೊಂಡಿದೆ ಬೇರೆ. ಆ ನೋವು ತಿನ್ನುತ್ತಿದ್ದೇನೆ . ನಿಮಗೆ ಆ ನೋವು ಎಲ್ಲಿ ಅರ್ಥವಾಗಬೇಕು? ಅಂದರೆ ಪರಮಾತ್ಮ ಚೆನ್ನಮಲ್ಲಿಕಾರ್ಜುನನನ್ನು ಗಂಡನನ್ನಾಗಿ ಪಡೆಯಬೇಕೆಂಬ ಪ್ರೀತಿ ಹೆಚ್ಚಾಗಿದೆ.ಅದು ಈಗ ವಿರಹವಾಗಿ ಮಾರ್ಪಟ್ಟಿದೆ ಆ ವಿರಹವೇದನೆಯ ನೋವನ್ನು ಎಷ್ಟು ಹೇಳಿದರೂ ಕಡಿಮೆ. ಅದು ನಿಮಗೆ ಅರ್ಥವೂ ಆಗುವುದಿಲ್ಲ. ಲೌಕಿಕರಿಗೆ ಅಲೌಕಿವೆಲ್ಲಿ ಅರ್ಥವಾಗಬೇಕು? ಎಲ್ಲವನ್ನು ಲೌಕಿಕ ದೃಷ್ಟಿಯಿಂದ ನೋಡುವವರಿಗೆ ಅನುಭಾವ ಅರ್ಥವಾಗುವುದಿಲ್ಲ. ಚೆನ್ನ ಮಲ್ಲಿಕಾರ್ಜುನ ಇರಿದ ಅಲಗು ಒಡಲಲ್ಲಿ ಮುರಿದು ಅಳಲುವ ಎನ್ನಳಲನು ನೀವೆತ್ತ ಬಲ್ಲಿರೆ ತಾಯಿಗಳಿರಾ . ಎನ್ನುವುದು ಪರಮಾತ್ಮನ ವಿರಹವನ್ನು ತುಂಬ ಮರ್ಮಭೇಧಕಾವಾಗಿ ಚಿತ್ರಿಸುತ್ತದೆ. ಅಕ್ಕನವರ ವಿರಹ ಎಷ್ಟೊಂದು ಹೃದಯವಿದ್ರಾವಕವಾದುದು ಎನ್ನುವುದನ್ನು ಈ ರೂಪಕ ತುಂಬ ಪರಿಣಾಮಕಾರಿಯಾಗಿ ಹೇಳುತ್ತದೆ. ಅಕ್ಕ ಮಹಾದೇವಿಯವರು ಈ ವಿರಹಾಗ್ನಿಯನ್ನು ಸಾಕ್ಷಾತ್ಕಾರದ ಮೂಲಕ ಆನಂದ ಮಯಮಾಡಿಕೊಂಡರು. ತಪಸ್ಸಿನ ಜ್ಞಾನಾಗ್ನಿಯು ವಿರಹಾಗ್ನಿಯನ್ನು ಜ್ಞಾನದ ಬೆಳಕಾಗಿ ಪರಿವರ್ತಿಸಿ ಲೋಕದ ಜನರು ಉದ್ಧಾರವಾಗುವಂತೆ ಮಾಡಿತು.

14) ಬೆಟ್ಟಕ್ಕೆ ಸಾರವಿಲ್ಲವೆಂಬರು. ತರುಗಳು ಹುಟ್ಟಿದ ಪರಿ ಇನ್ನೆಂತಯ್ಯ?
ಇದ್ದಲಿಗೆ ರಸ ಇಲ್ಲೆಂಬರು. ಕಬ್ಬುನ ಕರಗುವ ಪರಿ ಇನ್ನೆಂತಯ್ಯ?
ಎನಗೆ ಕಾಯ ಇಲ್ಲೆಂಬರು ಚೆನ್ನಮಲ್ಲಿಕಾರ್ಜುನ ಒಲಿದ ಪರಿ ಇನ್ನೆಂತಯ್ಯ?

## ಪದಗಳ ಅರ್ಥ

ಸಾರ-ಸತ್ವ,
ತರು-ಮರ,
ರಸ-ಶಕ್ತಿ.

## ವಚನದ ಅರ್ಥ

ಬೆಟ್ಟಕ್ಕೆ ಸಾರವಿಲ್ಲವೆಂಬರು. ತರುಗಳು ಹುಟ್ಟಿದ ಪರಿ ಇನ್ನೆಂತಯ್ಯ? ಬೆಟ್ಟ ಕಲ್ಲು,ಬಂಡೆ .ಅಲ್ಲಿ ಸಾರ,ಸತ್ವ ಇಲ್ಲ ಎಂದು ಹೇಳುತ್ತಾರೆ . ಹಾಗಾದರೆ ಮರಗಳು ಹೇಗೆ ಹುಟ್ಟಿದವು. ಇದ್ದಲಿಗೆ ರಸ ಇಲ್ಲೆಂಬರು. ಕಬ್ಬುನ ಕರಗುವ ಪರಿ ಎಂತಯ್ಯ? ಇದ್ದಲು ಅದರಲ್ಲಿ ಏನೂ ಇಲ್ಲ ಎಲ್ಲ ಸುಟ್ಟು ಕರಕಲು ಎಂದು ಹೇಳುತ್ತಾರೆ. ಹಾಗಾದರೆ ಈ ಇದ್ದಲಿಗೆ ಕಬ್ಬುನ ಕರಗಿ ನೀರಾಯಿತಲ್ಲ ಹೇಗಾಯಿತು? ಎನಗೆ ಕಾಯಯಿಲ್ಲೆಂಬರು ಚೆನ್ನಮಲ್ಲಿಕಾರ್ಜುನ ಒಲಿದ ಪರಿ ಎಂತಯ್ಯ? ನನಗೆ ಶರೀರವೆ ಇಲ್ಲ ಎಂದು ಮಾತಾಡುತ್ತಾರೆ. ಚೆನ್ನಮಲ್ಲಿಕಾರ್ಜುನನು ಒಲಿದುದಾದರೂ ಹೇಗೆ? ಲೋಕರೂಢಿಯ ಮಾತುಗಳಿಗೆ ಪ್ರತಿಕ್ರಿಯೆ ಈ ವಚನ.

15) ಭಕ್ತೆಯಾನಪ್ಪೆನಯ್ಯಾ. ಕತೃರ್ಭೃತ್ಯವ ನಾನರಿಯೆ.
ಮಹೇಶ್ವರಯಾನಪ್ಪೆನಯ್ಯಾ.
ವ್ರತ ನೇಮ ಛಲವ ನಾನರಿಯೆ. ಪ್ರಸಾದಿ ಯಾನಪ್ಪೆನಯ್ಯಾ.
ಅರ್ಪಿತನರ್ಪಿತವಬ
ಭೇದವ ನಾನರಿಯೆ.
ಪ್ರಾಣಲಿಂಗಿಯಾನಪ್ಪೆನಯ್ಯಾ. ಅನುಭಾವದ ಗಮನವ ನಾನರಿಯೆ.

ಶರಣೆಯಾನಪ್ಪೆನಯ್ಯಾ, ಶರಣಸತಿ ಲಿಂಗಪತಿ ಎಂಬ ಭಾವವ ನಾನರಿಯೆ.
ಐಕ್ಯಳಾನಪ್ಪೆನಯ್ಯಾ?ಬೆರಸಿ ಭೇದವ ನಾನರಿಯೆ.
ಚೆನ್ನಮಲ್ಲಿಕಾರ್ಜುನಯ್ಯಾ, ಷಟಸ್ಥಲದಲ್ಲಿ ನಿ:ಸ್ಥಲವಾಗಿಪ್ಪೆನು.

## ವಚನದ ಅರ್ಥ

ಭಕ್ತಿ ಆನಪ್ಪೆನಯ್ಯಾ ಕರ್ತೃನೃತ್ಯವ ನಾನರಿಯೆ.ಮಹೇಶ್ವರಿ ಆನಪ್ಪೆನಯ್ಯಾ ವ್ರತನೇಮಫಲವ ನಾನರಿಯೆ. ನಾನು ಭಕ್ತಳು. ಆದರೆ ಒಡೆಯತೊತ್ತು ತಿಳಿಯೆ. ಮಹೇಶ್ವರಿ ನಾನು ನನಗೆ ವತ್ರ, ನೇಮ, ಫಲಗಳು ತಿಳಿಯವು ಪ್ರಸಾದಿ ಆನಪ್ಪೆನಯ್ಯಾ ಅರ್ಪಿತ ಅನರ್ಪಿತವ ನಾನರಿಯೆ. ನಾನು ಪ್ರಸಾದಿ ಆದರೆ ಅರ್ಪಣೆ ಯಾವುದು. ಅನರ್ಪಣೆ ಯಾವುದು ತಿಳಿಯೆ. ಪ್ರಾಣಲಿಂಗಿ ಆನಪ್ಪೆನಯ್ಯಾ ಅನುಭಾವದ ಗಮನವ ನಾನರಿಯೆ. ಷಟಸ್ಥಲದಲ್ಲಿ ಪ್ರಾಣಲಿಂಗ ಸ್ಥಲ ನಾಲ್ಕನೆಯದು. ನಾನು ಪ್ರಾಣ ಲಿಂಗಿ ಹೌದು. ಆದರೆ ಅನುಭಾವದ ದಾರಿಗಳು ರೀತಿಗಳು ನನಗೆ ತಿಳಿಯದು. ಶರಣೆ ಆನಪ್ಪೆನಯ್ಯಾ ಶರಣಸತಿ ಲಿಂಗಪತಿ ಎಂಬುದನರಿಯೆ. ನಾನು ಶರಣಸತಿ ಹೌದು, ಆದರೆ ಶರಣಸತಿ ಲಿಂಗಪತಿ ಎಂದರೇನೆಂದು ತಿಳಿಯದು. ಐಕ್ಯಳಾನಪ್ಪೆನಯ್ಯ.ಬೆರಸಿ ಭೇದವ ನಾನರಿಯೆ. ನಾನು ಐಕ್ಯಳು ಬೆರಸಿ ತಿಳಿಯದು. ಬೆರಸಿದ ಭೇದ ತಿಳಿಯದು. ಚೆನ್ನಮಲ್ಲಿಕಾರ್ಜುನಯ್ಯ ಷಟಸ್ಥಲದಲ್ಲಿ ನಿಮ್ಮಲವಾಗಿಪ್ಪೆನು. ಪರಮಾತ್ಮನೆ ಚಿನ್ನ ಮಲ್ಲಿಕಾರ್ಜುನನೆ ಆರುಸ್ಥಲಗಳಲ್ಲಿ ಯಾವಸ್ಥಲವಿಲ್ಲದೆ ನಾನಿದ್ದೆನು.

ಅಕ್ಕಮಹಾದೇವಿಯವರು. ಪ್ರಾರ್ಥಿಸಿರುವುದು . ಅರಿವಿನ ಮಹಂತರ ನಡೆಯೆ ಹೀಗೆ. ಅವರು ಸರ್ವಸ್ವವನ್ನು ಅರಿತು ಶಬ್ದ ಮುಗ್ಧರಾಗಿ ಲೋಕ ಹಿತದ ಒಗತನ ನಡೆಸುತ್ತಾರೆ.
ಅಕ್ಕಮಹಾದೇವಿಯಂತಹವರಿಗೆ ಯಾವಸ್ಥಲವೇನು? - ಎಲ್ಲ ಸ್ಥಲಗಳು ಅವರಿದ್ದಲ್ಲಿ ಇವೆ. ಅವರಂತಹ ಪರಮ ವಿರಾಗಿಗಳು, ಜ್ಞಾನಿಗಳು ಎಲ್ಲವನ್ನು ದಾಟಿದ ಪರಮಾತ್ಮರೆ ತಾವಾದ ನಿಜಾನಂದರು.

16) ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ ?

ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ ?
ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದಡೆಂತಯ್ಯಾ ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ವಚಪದ ಅರ್ಥ

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ? ಬೆಟ್ಟದ ಮೇಲೆ ಮನೆ ಮಾಡಿ ಕಾಡು ಪ್ರಾಣಿಗಳಿಗೆ ಹೆದರಿದರೆ ಹೇಗೆ? ಸಮುದ್ರದ ದಡದಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ?ಸಮುದ್ರದಂಡೆಯಲ್ಲಿ ಮನೆ ಕಟ್ಟಲಾಗಿದೆ. ಈಗ ಅಲೆ ಅಬ್ಬರ ನೊರೆ ತೆರೆ ಎಂದರೆ ಹೇಗೆ?ಸಂತೆಯೊಳ ಗೊಂದು ಮನೆಯಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ? ಸಂತೆಯಲ್ಲಿ ಮನೆ ಮಾಡಿ ಆಯಿತು ಈಗ ಗದ್ದಲ ಬಹಳ ಎಂದರೆ ಹೇಗೆ? ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ ಲೋಕದಲ್ಲಿ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ ಸಮಾಧಾನಿಯಾಗಿರಬೇಕು. ಈಭೂಮಿಯಲ್ಲಿ ಹುಟ್ಟಿ ಬಂದಾಯಿತು. ಹುಟ್ಟುವುದು ಬಿಡುವುದು ನಮ್ಮಕೈಲಿರಲಿಲ್ಲ. ಈಗ ಹುಟ್ಟಿದೆ. ಮೇಲೆ ಸಮಾಧಾನಿಯಾಗಿ ಜೀವನ ಮಾಡುವುದನ್ನು ಕಲಿಯ ಬೇಕು. ಇಲ್ಲಿ ಹೊಗಳಿಕೆ ತೆಗಳಿಕೆ ಎಲ್ಲ ಇದ್ದದ್ದೆ.

ಪ್ರೀತಿಯಿಂದಾಗಿ ಅಕ್ಕನವರ ಜೀವನ ಬೀದಿ ಮಾತಾಯಿತು. ಗೃಹ ಜೀವನದ ಬದುಕಿನಿಂದ ಅನುಭಾವಜೀವನಕ್ಕೆ ಅವರು ಕಾಲಿರಿಸಿದರು. ಇದರಿಂದ ಅಕ್ಕನವರ ಜೀವನ ಲೋಕದ ಜನರ ಸಾವಿರ, ಸಾವಿರ ಮಾತುಗಳಿಗೆ ವಿಷಯವಾಯಿತು. ಈ ಲೋಕದ ಜನರಿಂದ ಸ್ತುತಿಗಳೂ ಬಂದವು, ನಿಂದೆಗಳೂ ಬಂದವು. ಅನುಭಾವ ಜೀವನವನ್ನು ಆದರಿಸುವವರೂ ಇದ್ದಾರೆ. ನಿಂದಿಸುವವರೂ ಇದ್ದಾರೆ ಇದರಿಂದ ಈ ಲೋಕದ ಮಾತುಗಳಿಗೆ ಹಿಗ್ಗುವುದಾಗಲಿ, ಕುಗ್ಗುವುದಾಗಲಿ ಬೇಡ. ಸಮಚಿತ್ತದ ನೆಲೆಯಲ್ಲಿ ಲೋಕದ ಮಾತುಗಳನ್ನು ಸ್ವಿಕರಿಸುವ ಸ್ಥಿತ ಪ್ರಜ್ಞಮನಸ್ಸನ್ನು ಅವರು ಸಾಧಿಸಿಕೊಂಡರು.. ತಮ್ಮನ್ನು ತಾವು ಸಮಾಧಾನಿಸಿಕೊಡಿರುವ ಈವಚನವು ಎಲ್ಲ ಜಗದ ಜೀವಿಗಳಿಗೂ ಸಾಂತ್ವನ ಹೇಳುತ್ತದೆ. ಲೋಕದ ಬಾಳು ಎಂಥದು ಎಂಬುದನ್ನು 3 ದೃಷ್ಟಾಂತದ ಮೂಲಕ ವಿಶ್ಲೇಷಿಸಿದ್ದಾರೆ. 1. ಮನೆ ಕಟ್ಟಿ ರುವುದು ಬೆಟ್ಟದಮೇಲೆ. ಬೆಟ್ಟ

ಎಂದಮೇಲೆ ಕಾಡು, ಬೆಟ್ಟಗುಡ್ಡ, ಕ್ರೂರಮೃಗ ವಿಷಜಂತು ಇವೆಲ್ಲ ಇದ್ದದ್ದೆ. ಅಂದಮೇಲೆ ಮೃಗಗಳಿಗೆ ಹೆದರುವುದರಲ್ಲಿ ಅರ್ಥ ವಿಲ್ಲ. ಮನೆ ಕಟ್ಟಲು ನಿರ್ಧರಿಸಿದಾಗಲೆ ವಿಚಾರ ಮಾಡಬೇಕಾಗಿತ್ತು. ಈಗ ಇಲ್ಲಿ ಬದುಕುವುದು ಅನಿವಾರ್ಯ. ಮನೆಕಟ್ಟಿದ್ದು ಸಮುದ್ರದ ದಡದಲ್ಲಿ. ಇಲ್ಲಿ ನೊರೆಗಳು

ಅಲೆಗಳಬ್ಬರ ಇದೆ ಎಂದರೆ ಹೇಗೆ? ಇವುಗಳಿಗೆ ಹೆದರುವುದು ಅರ್ಥವಿಲ್ಲದ್ದು. ಮನೆಕಟ್ಟಿದ್ದು ಸಂತೆಯಲ್ಲಿ . ಇಲ್ಲಿ ಗದ್ದಲ ಬಹಳ . ಶಬ್ದ ಬಹಳ ಎಂದರೆ ಹೇಗೆ? ಅವೆಲ್ಲ ಇಲ್ಲಿ ಇದ್ದದ್ದೆ. ಇವನ್ನು ಎದುರಿಸಿ ಬಾಳುವುದೆ ಜೀವನ.ಈ ಜೀವ ನವೂ ಒಂದು ಸಂತೆ, ಸಮುದ್ರ .ಒಂದು ಬೆಟ್ಟ . ಸಂತೆ ಏರ್ಪಡುವುದೆ ವ್ಯಾಪಾರಕ್ಕೆ. ವ್ಯಾಪಾರ ಎಂದರೆ ಮಾತು, ಗದ್ದಲ, ಧೂಳು, ಕಸ, ಇವೆಲ್ಲ ಇದ್ದದ್ದೆ. ಸರಕು, ಸಾಗಾಣಿಕೆ ಮೌನದಲ್ಲಿ ನಡೆಯುವುದಿಲ್ಲ. ಈ ಲೋಕದಲ್ಲಿ ಜನಿಸಿ ಬಂದುಗಾಯಿತು. ಈ ಜೀವನ ಹೇಡಿಗಳಿಗಲ್ಲ. ಪಲಾಯನವಾದಿಗಳಿಗೂ ಅಲ್ಲ. ಇರುವುದನ್ನು ಒಪ್ಪಿ ಕೊಂಡು ಬುದ್ಧಿವಂತಿಕೆಯಿಂದ ಬಾಳುವುದೆ ಸಾದನೆ. ಹೊಗಳಿಕೆ ತೆಗಳಿಕೆ ಜೀವನದಲ್ಲಿವೆ . ಸುಖ, ದುಃಖ ಎರಡೂ ಇವೆ. ಹೊಂದಿ ಬಾಳುವುದೆ ಬುದ್ದಿವಂತಿಕೆ. ಎಲ್ಲ
ವನ್ನೂ ಸಮಾಧಾನದಿಂದ ಸ್ವೀಕರಿಸಬೇಕು. ತಮ್ಮನ್ನು ಸಂತೈಸಿಕೊಂಡಿದ್ದಾರೆ.

17) ಬಟ್ಟಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣ
ಅಣ್ಣ ನಾನು ಹೆಂಗೂಸಲ್ಲ. ಅಣ್ಣ ನಾನು ಸೂಳೆಯಲ್ಲ. ಅಣ್ಣ ನನ್ನ ಕಂಡು ಕಂಡು ಆರೆಂದು ಬಂದಿರಣ್ಣ. ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಪುರುಷರು ನಮಗಾಗದ ಮೋರೆ ನೋಡಣ್ಣ.

ಪದಗಳ ಅರ್ಥ

ಬಟ್ಟಿಹ -ದುಂಡಾದ,
ಭರ-ಚಿಮ್ಮುವ, ಉಕ್ಕುವ ತಾರುಣ್ಯ,
ಹೆಂಗೂಸು -ಲಗ್ನವಾಗುವ ಹೆಣ್ಣು ಮಗಳಲ್ಲ. ಲೌಕಿಕ್ಕೆ ಬರುವ ಹೆಣ್ಣುಮಗಳಲ್ಲ. ಮೋರೆ-ಮುಖ

## ವಚನದ ಅರ್ಥ

ಬಟ್ಟೆಹ ಮೊಲೆಯ ಭರದ ಜವ್ವನದ ಚೆಲುವ ಕಂಡುಬಂದಿರಣ್ಣ. ಅಣ್ಣ ನಾನು ಹೆಂಗೂಸಲ್ಲ. ಅಣ್ಣ ನಾನು ಸೂಳೆಯಲ್ಲ. ನನ್ನ ದುಂಡು ಶರೀರ, ತಾರುಣ್ಯ ,ಚೆಲುವು,ಸೌಂದಯ್ಯ ಇವುಗಳನ್ನು ನೋಡಿ ನೀವು ಬಂದಿರೆ? ಅಣ್ಣ ನಾನು ಲಗ್ನಕ್ಕೆ ಬರುವ ಹೆಣ್ಣುಮಗಳಲ್ಲ. ನಾನು ಬೆಲೆವೆಣ್ಣೂ ಅಲ್ಲ. ಅಣ್ಣ ನನ್ನ ಕಂಡು ಕಂಡು ಆರೆಂದುಬಂದಿರಣ್ಣ.ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಪುರುಷರು ಸಹೋದರರರು ಛೀ ಹೋಗಾ ಮರುಳೆ . ನನ್ನನ್ನು ಯಾರೆಂದು ತಿಳಿದು ಬಂದಿರಿ. ಪರಮಾತ್ಮ ಚೆನ್ನಮಲ್ಲಿಕಾರ್ಜುನನಲ್ಲದೆ ಉಳಿದ ಪುರುಷರು ನನಗೆ ಸಹೋದರರು ಛೀ ಹೊಗಾ ಮರುಳೆ. ಪರಮಾತ್ಮನನ್ನು ಪತಿಯನ್ನಾಗಿ ಪಡೆಯಬೇಕೆಂದು ಅನುಭಾವಜೀವನಕ್ಕೆ ಬಂದರು. ಅಂತಹ ಅಕ್ಕನವರನ್ನು ಲೋಕದ ಗಂಡುಗಳು ಲೌಕಿಕ ಭೋಗೋ ಪಭೋಗವನ್ನು ಪಡೆಯಲು ಆಹ್ವಾನಿಸಿದರು . ಇದಲ್ಲವೆ ವಿಧಿಯ ವಿಕಟಾಟ್ಟಹಾಸ. ಯಾರು ಜಗತ್ತಿಗೆಲ್ಲ ಜಗನ್ಮಾತೆಯೋ ಅಂತಹ ತಾಯಿಯನ್ನು ಹೀಗೆ ಕೇಳುವ ಗಂಡುಗಳನ್ನು ಹುಚ್ಚರೆನ್ನಬೇಕೊ ಅಥವಾ ದೇವರೊಡ್ಡಿದ ಪರೀಕ್ಷೆಯೆನ್ನಬೇಕೋ? ತಿಳಿ ಯದು. ಆದರೆ ಅಕ್ಕನವರು ಇಂತಹ ಮೂರ್ಖರಿಗೆ ಸರಿಯಾದ ಉತ್ತರವನ್ನೆ ನೀಡಿದ್ದಾರೆ. ಈ ವಚನ ಅಕ್ಕನವರನ್ನು ಜನರು ಬಹಳ ನೋಯಿಸಿದ್ದಾರೆ ಎಂಬುದನ್ನು ತಿಳಿಸುತ್ತದೆ. ನನ್ನ ಚೆಲುವು, ತಾರುಣ್ಯ ಇವನ್ನು ಕಂಡು ನಿವು ಬಂದಿರೇನೊ? ನಾನು ಮದುವೆಗೆ,ಭೋಗಕ್ಕೆ ಬರುವ ಹೆಣ್ಣುಮಗಳಲ್ಲ. ಅಣ್ಣಂದಿರಾ ನನ್ನನ್ನು ಏನೆಂದು ತಿಳಿದಿರಿ. ಚೆನ್ನ ಮಲ್ಲಿಕಾರ್ಜುನನಲ್ಲದೆ ಇತರರ ಮುಖ ಕೂಡ ನೋಡುವವಳಲ್ಲ. ನಾನು ಕಲಾವಂತರ ಮಗಳೂ ಅಲ್ಲ. ಪಾತ್ರದವಳೂ ಅಲ್ಲ. ತಪಸ್ಸು ಜ್ಞಾನವನ್ನು ತಿಳಿಯದ ವೈರಾಗ್ಯದ ಎತ್ತರವನ್ನು ಅರಿಯದ ಜನರು ಭಕ್ತಿ ವ್ಯಕ್ತಮಾಡಬೇಕಾದಲ್ಲಿ ಭೋಗ ಬಯಸಿದ್ದಾರೆ. ಇಂತಹ ಕಠಿನ ಪರೀಕ್ಷೆಗಳನ್ನೆಲ್ಲ ಗೆದ್ದು ಅಕ್ಕನವರು ಅನುಭಾವಸಮುದ್ರವನ್ನು ಈಜಿ ದಡ ಸೇರಿದ್ದಾರೆ. ಸುಮಾರು 15 ವಚನಗಳು ಈ ರೀತಿ ಅಭಿವ್ಯಕ್ತಿ ಪಡೆದಿವೆ.
ಗಂಡನನ್ನು ಕಳೆದುಕೊಂಡು ವಿಧವೆಯಾದ ಭಕ್ತ ಮೀರಬಾಯಿ ಅವರಿಗೂ ಇಂತಹ ಪ್ರಸಂಗಗಳು ಎದುರಾದವು.

18) ಭಾನುವಿನಂತಿಪ್ಪುದು ಜ್ಞಾನ. ಭಾನುಕಿರಣದಂತಿಪ್ಪುದು ಭಕ್ತಿ ಭಾನುವನುಳಿದು ಕಿರಣಂಗಳಿಲ್ಲ. ಕಿರಣಂಗಳನುಳಿದು ಭಾನುವಿಲ್ಲ. ಜ್ಞಾನವಿಲ್ಲದ ಭಕ್ತಿ ಭಕ್ತಿಯಿಲ್ಲದ ಜ್ಞಾನ ವೆಂತಿಪ್ಪುದು ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಭಾನುವಿನಂತಿಪ್ಪುದು ಜ್ಞಾನ. ಭಾನುಕಿರಣದಂತಿಪ್ಪುದು ಭಕ್ತಿ ಜ್ಞಾನವು ಸೂರ್ಯ ನಂತಿದೆ. ಭಕ್ತಿಯು ಸೂರ್ಯನ ಕಿರಣದಂತಿದೆ. ಭಾನುವನುಳಿದು ಕಿರಣಂಗಳಿಲ್ಲ. ಕಿರ ಗಂಗಳನುಳಿದು ಭಾನುವಿಲ್ಲ.ಸೂಯ್ಯನನ್ನು ಬಿಟ್ಟು ಕಿರಣಗಳಿಲ್ಲ ಕಿರಣಗಳನ್ನು ಬಿಟ್ಟು ಸೂರನಿಲ್ಲ. ಜ್ಞಾನವಿಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನ ವೆಂತಿಪ್ಪುದು. ಜ್ಞಾನವಿಲ್ಲದೆ ಭಕ್ತಿಯಿಲ್ಲ. ಭಕ್ತಿಯಿಲ್ಲದೆ ಜ್ಞಾನವಿಲ್ಲ. ಭಕ್ತಿಜ್ಞಾನದ ಸಂಬಂಧ ವಿಚಾರಗಳನ್ನು ಇಲ್ಲಿ ವಿವರಿಸಿದ್ದಾರೆ. ಭಕ್ತಿಜ್ಞಾನವು ಅವಿನಾಭಾವ ಸಂಬಂಧ ಉಳ್ಳದ್ದು. ಭಕ್ತಿಸಹಿತವಾಗಿ ಜ್ಞಾನವಿದೆ. ಜ್ಞಾನ ಸಹಿತವಾಗಿ ಭಕ್ತಿಯಿದೆ. ಭಕ್ತಿಜ್ಞಾನದ ವ್ಯಾಖ್ಯೆಯನ್ನು ವಿವರಿಸುವುದಕ್ಕಾಗಿ ಸೂರ್ಯ, ಸೂರ್ಯನ ಕಿರಣದ ಉದಾಹರಣೆ ಕೊಡಲಾಗಿದೆ. ಸೂರನಿಲ್ಲದೆ ಕಿರಣಗಳಿಲ್ಲ. ಕಿರಣಗಳಿಲ್ಲದೆ ಸೂರ್ಯನಿಲ್ಲ. ಭಕ್ತಿ ಪ್ರಕಟವಾಗಬೇಕಾದರೆ ಮೊದಲು ವ್ಯಕ್ತಿಯಲ್ಲಿ ಜ್ಞಾನ, ಅರಿವು ಬೇಕು. ಜ್ಞಾನವಾಗಬೇಕಾದರೆ ಭಕ್ತಿಯೂ ಬೇಕು. ಭಕ್ತಿ ಯಿಲ್ಲದ ಜ್ಞಾನ ತರ್ಕವಾಗುತ್ತದೆ. ಜ್ಞಾನವಿಲ್ಲದ ಭಕ್ತಿ ಮೂಢ ನಂಬಿಕೆಯಾಗುತ್ತದೆ. ಎರಡೂ ಉಪಯೋಗವಿಲ್ಲ. ಭಕ್ತಿಜ್ಞಾನವೆರಡೂ ಮನುಷ್ಯನಿಗೆ ಬೇಕು.